ಎಂದು ಫೂಲ್ ಮಾಡುವುದಕ್ಕೆ ನಾಡಿನ ಜನರಿಗೆ ಏನಾದರೂ ಹೇಳಿದ್ದಾರೋ ಏನೋ! ನಿಜವಾಗಿ ಅವರು ಇಂಪ್ಲಿಮೆಂಟ್ ಮಾಡುವ ದೃಷ್ಟಿಯಿಂದ ಹೇಳಿದ್ದಾರೋ ಅಥವಾ ಇಲ್ಲವೋ ನಮಗೆ ಗೊತ್ತಾಗುತ್ತಿಲ್ಲ. ಅವರು ಏನು ಹೇಳಿದರು, ಏಪ್ರಿಲ್ ಒಂದನೇ ತಾರೀಖು ಎಂದು ಹೇಳಿದರು. ಏಪ್ರಿಲ್ ಒಂದನೇ ತಾರೀಖು ಎಂದು ''ಏಪ್ರಿಲ್ ಫೂಲ್'' ಮಾಡುವುದಿದ್ದರೆ ಹಾಗೆ ನಾಡಿನ ಜನರಿಗೆ ಫೂಲ್ ಮಾಡುವುದಕ್ಕೆ ಹೇಳಿದ್ದಾರೊ ಅಥವಾ ನಿಜವಾಗಿ ಅವರು ಮಾಡಬೇಕು ಎಂಬುದು ಇದೆಯೋ ನಮಗೆ ಗೊತ್ತಾಗುತ್ತಿಲ್ಲ. ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಬಹಳಷ್ಟು ಸಂದರ್ಭಗಳಲ್ಲಿ ನೋಡಿದ್ದೇನೆ; ಬಹಳಷ್ಟು ಸ್ಟೇಟ್‌ಮೆಂಟ್‌ಗಳನ್ನು ಮಾಡುತ್ತಿದ್ದಾರೆ. ಆದರೆ ಅದು ಯಾವುದೂ ಇಂಪ್ಲಿಮೆಂಟ್ ಆಗುತ್ತಿಲ್ಲ. ಇದು ಬಹಳಷ್ಟು ಇದೆ. ಆ ವಿಷಯಗಳ ಬಗ್ಗೆ ನಾವು ಹೇಳುತ್ತೇವೆ. ಮುಖ್ಯಮಂತ್ರಿಗಳು ಸಹ ಈ ವಿಷಯದ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾಗಿದೆ. ಕನ್ನಡವನ್ನು ಏಕೆ ಇವತ್ತಿನಿಂದಲೇ ಜಾರಿಗೆ ತರುವುದಕ್ಕೆ ಆಗಲಿಲ್ಲ? ಇವತ್ತು ಅವರೇ ಹೇಳಿದ ಹಾಗೆ ಮುಖ್ಯಮಂತ್ರಿಗಳ ಕಛೇರಿಯ ಮೇಲೆ ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಯಲ್ಲೂ ಬೋರ್ಡ್ ಇದೆ. ಅದನ್ನು ಅವರು ತೆಗೆಸಬೇಕಾಗಿತ್ತು. ಈ ಕೆಲಸವನ್ನು ವಿಧಾನಸೌಧದಿಂದಲೇ ಪ್ರಾರಂಭ ಮಾಡಬೇಕಾಗಿತ್ತು. ಆ ಕೆಲಸವನ್ನು ಅವರು ಮಾಡಲಿಲ್ಲ. ಶ್ರೀ ವಾಟಾಳ್ ನಾಗರಾಜ್ ಏನು ಪ್ರಸ್ತಾಪ ಮಾಡಿದರು, ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಅದನ್ನು ಜಾರಿಗೆ ತರಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಏಕೆ ಜಾರಿಗೆ ತರಲಿಲ್ಲ. ಅದರ ಬಗ್ಗೆ ಅವರು ಕ್ಷಮೆ ಕೇಳಬೇಕೆಂದು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ವಿಷಯ (2) ಏಪ್ರಿಲ್ 1ನೇ ತಾರೀಖಿನಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಣೆ ಮಾಡಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಕನ್ನಡವನ್ನು ಜಾರಿಗೆ ತರುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಕಟ್ಟುನಿಟ್ಟಾಗಿ ಬದ್ಧರಾಗಿದ್ದಾರೆ. ಅವರ ಬಗ್ಗೆ ನನಗೆ ವಿಶ್ವಾಸವಿದೆ. ಅವರು ಹೇಳಿದ ಹಾಗೆ ನಡೆದುಕೊಳ್ಳಬೇಕಾಗಿದೆ. ನಾವು ಶ್ರೀ ವಾಟಾಳ್ ನಾಗರಾಜ್ ಅವರ ಹಿಂದೆ ಹೋಗಿ ಬ್ರಷ್ ತೆಗೆದುಕೊಂಡು ಬಣ್ಣ ಬಳಿಯುವುದಕ್ಕೆ ಸಿದ್ಧರಿಲ್ಲ. ಏಕೆಂದರೆ ಇದು ಒಂದು ಬೋರ್ಡ್‌ನ ಪ್ರಶ್ನೆಯಲ್ಲ, ಪ್ರಶ್ನೆಯಿರುವುದು ಪ್ರಮಾಣಿಕವಾಗಿ ಕನ್ನಡವನ್ನು ಎಲ್ಲ ರಂಗಗಳಲ್ಲೂ ಜಾರಿಗೆ ತರುವುದಕ್ಕೆ ಕಳಕಳಿ ಇದೆಯೋ ಅಥವಾ ಇಲ್ಲವೋ ಎನ್ನುವುದು. ಅನೇಕ ವರ್ಷಗಳಿಂದ ಇಂಥ ಆಶ್ವಾಸನೆಗಳನ್ನು ಕೊಟ್ಟುಕೊಂಡು ಬರುತ್ತಿದ್ದೇವೆ. ಇದಕ್ಕೆ ಮಂಗಳ ಹಾಡಿ ಅದನ್ನು ಜಾರಿಗೆ ತರುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಕನ್ನಡ ನಾಡಿನ ಜನ ಇವತ್ತು ಇದನ್ನು ಜಾರಿಗೆ ತರಬಹುದು ಎಂದು ತಿಳಿದುಕೊಂಡಿದ್ದಾರೆ. ಎಲ್ಲ ರಂಗದಲ್ಲೂ ಹೀಗೇಕೆ ಆಗುತ್ತಿದೆಯೋ ನನಗೆ ಗೊತ್ತಿಲ್ಲ. ಇವತ್ತು ನೌಕರಿ ಇರಬಹುದು, ಅಥವಾ ಮತ್ತೊಂದು ವಿಚಾರದಲ್ಲಿ ಇರಬಹುದು. ಜನರಿಗೆ ಆಧ್ಯತೆ ಸಿಗದೆ ಓಡಾಡುತ್ತಾ ಇರುವಂಥ ಸಂದರ್ಭ ಇದೆ. ನಾನು ಇಂಗ್ಲೀಷ್ ಬೋರ್ಡನ್ನು ವಿರೋಧ ಮಾಡುತ್ತಿಲ್ಲ. ಆದರೆ ಅದರ ಪಕ್ಕದಲ್ಲೇ ಕನ್ನಡ ಬೋರ್ಡ್ ಇರಬೇಕಾದುದು ಅನಿವಾರ್ಯ ತಾನೇ. ಈ ಸದನದಲ್ಲಿ ತಾವು ಅನೇಕ ಸಾರಿ ಹೇಳಿದ್ದೀರಿ. ಅಧಿಕಾರಿಗಳು ಕೊಡುವಂತಹ ವಿಚಾರವಲ್ಲ ಇಂಗ್ಲೀಷ್‌ನಲ್ಲೇ ಇರುತ್ತದೆ ಎಂದು ಅನೇಕ ಜನಕ್ಕೆ ಕನ್ನಡ ಭಾಷೆಯ ಪರಿಜ್ಞಾನವಿಲ್ಲ ಎಂದು ಆಯಿತು. ಇವತ್ತು ವಿಧಾನ ಸೌಧದಲ್ಲಿ ಇಂಗ್ಲಿಷ್ ಬೋರ್ಡ್ ಇದ್ದರೆ ಅದರ ಪಕ್ಕದಲ್ಲೇ ಕನ್ನಡ ಬೋರ್ಡ್ ಇರಲೇ ಬೇಕೆಂದು ತಾವು ಕಡ್ಡಾಯಮಾಡಿ. ಅದನ್ನು ಸರ್ಕಾರ ಜಾರಿಗೆ ತರಬೇಕು. ಮೊದಲು ಇಲ್ಲಿ ಎಲ್ಲ ಹಂತದಲ್ಲೂ ಕನ್ನಡವನ್ನು ಜಾರಿಗೆ ತರಬೇಕು. ಕರ್ನಾಟಕ ರಾಜ್ಯದಲ್ಲಿ ಇವತ್ತಿನಿಂದಲಾದರೂ ಹೊಸ ಅಧ್ಯಾಯ ಪ್ರಾರಂಭವಾಗಲಿ. ಈ ನಾಡಿನ ಜನತೆಗೆ ಎಲ್ಲ ಕ್ಷೇತ್ರದಲ್ಲಿ ಆದ್ಯತೆ ಸಿಗಬೇಕು. ಇದು ಉದ್ಯೋಗ ಇರಬಹುದು. ಅಥವಾ ಬೇರೆ ಬೇರೆ ಕೆಲಸ ಕಾರ್ಯಗಳಲ್ಲಿ ಇರಬಹುದು. ಕಾರ್ಖಾನೆ ನಡೆಸುವುದರಲ್ಲಿ ಇರಬಹುದು. ಹೊರಗಿನವರಿಗೆ ಆದ್ಯತೆ ಸಿಗಬಾರದು ಎಂದು ನಾನು

ಹೇಳುವುದಿಲ್ಲ. ಮೊದಲು ನಮಗೆ ಸಿಗಬೇಕಾಗಿದೆ. ಆದರೆ ಸಿಕ್ಕಿಲ್ಲ. ನಾವೇ ಇಲ್ಲಿ ಪರದೇಶಿಗಳಾಗಿದ್ದೇವೆ. ನಮ್ಮ ಕನ್ನಡ ನಾಡಿನ ಜನ ಇದನ್ನು ಸಹಿಸುವುದಿಲ್ಲ. ಆದುದರಿಂದ ದಯಮಾಡಿ ತಾವು ಸೂಚನೆ ಕೊಡಬೇಕು, ಸರ್ಕಾರಕ್ಕೆ ಹೇಳಬೇಕು. ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತರುತ್ತೇವೆ ಎಂದು ನೀವು ಹೇಳಿದ್ದಿರಿ. ಇವತ್ತಿನಿಂದಲೇ ಕನ್ನಡವನ್ನು ಜಾರಿಗೆ ತರುತ್ತೇವೆ. ಎನ್ನುವಂಥ ಒಂದು ದಿಟ್ಟ ನಿರ್ಧಾರವನ್ನು ಘೋಷಣೆ ಮಾಡುತ್ತೀರಾ? ಅಥವಾ ಇದು ಕೇವಲ ಜನರಿಗೆ ಮರಳು ಮಾಡುವುದಕ್ಕೆ ಹೇಳಿದಂತಹ ಮಾತೇ ಎಂದು ಸ್ಪಷ್ಟ ಮಾಡಬೇಕು. ಎಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಪಿ.ಜಿ.ಆರ್. ಸಿಂಧ್ಯ :- ಸನ್ಮಾನ್ಯ ಅಧ್ಯಕ್ಷರೆ, ಏಪ್ರಿಲ್ ಒಂದನೇ ತಾರೀಖಿನಿಂದ ಕನ್ನಡವನ್ನು ಎಲ್ಲಾ ಹಂತಗಳಲ್ಲೂ ಆಡಳಿತ ಭಾಷೆಯನ್ನಾಗಿ ಮಾಡುವುದರ ಜತೆಗೆ ತೀವ್ರವಾದ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡುತ್ತೇವೆ. ಎನ್ನುವಂತಹ ಘೋಷಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದರು. ನಾವೆಲ್ಲಾ ಏನು ನಿರೀಕ್ಷೆ ಮಾಡಿದ್ದೇವೆಂದರೆ, ಇವರು ಬಜೆಟ್‌ಗೆ ಒಪ್ಪಿಗೆಯನ್ನು ಪಡೆಯತಕ್ಕಂಥಹ ಸಂದರ್ಭದಲ್ಲಿ ಈ ಕಾರ್ಯಕ್ರಮಕ್ಕೋಸ್ಕರ ವಿಶೇಷವಾಗಿ ಹಣವನ್ನು ಇಟ್ಟುಕೊಳ್ಳುತ್ತೇವೆ ಎನ್ನತಕ್ಕ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ ಎಂದು ತಿಳಿದುಕೊಂಡಿದ್ದೆವು, ಅದನ್ನು ಮಾಡಿಲ್ಲ. ಇನ್ನು ಎರಡನೆಯದಾಗಿ ನಮ್ಮ ಸಹೋದ್ಯೋಗಿಗಳಾದಂಥ ಮಾನ್ಯ ವಾಟಾಳ್‌ರವರಿಗೆ ತೀವ್ರವಾದಂತಹ ಆಕ್ರೋಶ, ನೋವು ವ್ಯಕ್ತಪಡಿಸಲಿಕ್ಕೆ ಪ್ರೇರಣೆಯನ್ನು ಕೊಟ್ಟಿರತಕ್ಕಂತಹವರು ನಮ್ಮ ಮಾನ್ಯ ವಿಶ್ವನಾಥ್‌ರವರು. ಮಾನ್ಯ ಮಂತ್ರಿಯವರು ಹಂಪಿಯಲ್ಲಿ ಮಾತನಾಡುವಂಥ ಸಂದರ್ಭದಲ್ಲಿ ನಾನೇ ಸ್ವತಃ ಇಂಗ್ಲಿಷ್‌ನಲ್ಲಿ ಇರತಕ್ಕಂಥ ಎಲ್ಲಾ ಬೋರ್ಡ್‌ಗಳಿಗೂ ಸಹ ಮಾರ್ಚ್ 31ನೇ ತಾರೀಖು ರಾತ್ರಿ ಒಳಗಡೆ ಕನ್ನಡೀಕರಣ ಆಗದೆ ಹೋದರೆ ಅದಕ್ಕೆ ಕುಂಚವನ್ನು ಹಿಡಿದುಕೊಂಡು ಕಪ್ಪುಮಸಿಯನ್ನು ಬಳಿಯುತ್ತೇನೆ ಎನ್ನುವಂಥಹ ಘೋಷಣೆಯನ್ನು ಮಾಡಿದ್ದರು. ಇಲ್ಲಿ ಇದುವರೆಗೂ ಸಹ ನಮಗೆ ಮಾನ್ಯ ವಿಶ್ವನಾಥ್‌ರವರು ಕಂಡುಬಂದಿಲ್ಲ. ಮಾನ್ಯ ಅಧ್ಯಕ್ಷರೇ, ವಿಧಾನಸೌಧವನ್ನು ಪ್ರವೇಶ ಮಾಡುವಂಥ ದ್ವಾರದಲ್ಲಿ ತಾವು ಗಮನಿಸಿರಬಹುದು. ಮಾನ್ಯ ವಿಶ್ವನಾಥ್ ಮತ್ತು ಮಾನ್ಯ ಮೊಯಿಲಿಯವರ ಎರಡು ಭಾವ ಚಿತ್ರಗಳು ಬಿಟ್ಟರೆ ಕನ್ನಡದ ಬಗ್ಗೆ ಇದುವರೆಗೂ ಏನೂ ಮಾಡಿಲ್ಲ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸರ್ಕಾರದ ಆಡಳಿತ ಯಂತ್ರವನ್ನು ಚುರುಕು ಮಾಡುತ್ತೇವೆ. ಎನ್ನುವಂತಹ ಭರವಸೆಯನ್ನು ಮಾನ್ಯಮುಖ್ಯಮಂತ್ರಿಗಳು ಕೊಟ್ಟಿದ್ದರು. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅಷ್ಟೇ ಅಲ್ಲ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಅಷ್ಟೇ ಅಲ್ಲ ಸರ್ಕಾರಕ್ಕೆ ಸಂಬಂಧಪಟ್ಟಂಥಹ ಸಂಸ್ಥೆಗಳು ಏನು ಇವೆ, ಅದು ಎನ್‌ಜಿಇಎಫ್ ಅಥವಾ ಕೆಎಸ್‌ಆರ್‌ಟಿಸಿ ಅಥವಾ ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿ ಇರಬಹುದು. ಆ ಎಲ್ಲಾ ಉದ್ಯಮಗಳಲ್ಲೂ ಸಹ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ, ಎಲ್ಲಾ ಹಂತದಲ್ಲಿ ಕನ್ನಡದಲ್ಲಿಯೇ ವ್ಯವಹಾರಗಳನ್ನು ಮಾಡುವುದಕ್ಕೆ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೆವು. ಆದರೆ ದುರಾದೃಷ್ಟದಿಂದ ಕಳೆದ ಎರಡು ಮೂರು ವರ್ಷಗಳ ಕಾಲದಲ್ಲಿ ನಾವು ಅದಕ್ಕೆ ಏನು ಒತ್ತು ಕೊಟ್ಟಿದ್ದೆವು ಅದನ್ನು ಈ ಸರ್ಕಾರಕ್ಕೆ ಕೊಡುವುದಕ್ಕೆ ಆಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಏನು ನಿರೀಕ್ಷಣೆ ಮಾಡುತ್ತೇನೆ ಎಂದರೆ ಇವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ವಿಧಾನಸೌಧ ಇದೆ, ಪ್ರಚಾರ ಸಿಗುತ್ತದೆ, ಎಲ್ಲಾ ಕ್ಷೇತ್ರದ ಶಾಸಕರೂ ಬಂದಿರುತ್ತಾರೆ ಎಂದು ಕೊಂಡು ಇವರು ಬರೀ ಘೋಷಣೆ ಮಾಡಿದ್ದಾರೋ ಅಥವಾ ಈ ವರ್ಷದ ಆಯವ್ಯಯದಲ್ಲಿ ಈ ಕಾರ್ಯಕ್ರಮಕ್ಕೆ ಎಂದು ಏನಾದರೂ ಹಣ ಇಟ್ಟುಕೊಂಡಿದ್ದಾರೋ ಅದನ್ನು ಈ ಸದನಕ್ಕೆ ತಿಳಿಸಬೇಕು. ಇನ್ನು ಈ ಗಡಿ ಪ್ರದೇಶದಲ್ಲಿ ಇರತಕ್ಕಂತಹ ಜನರು ಏನು ಇದ್ದಾರೆ ಅವರು ತೆಲುಗಿನಲ್ಲಿ ಮಾತನಾಡುವವರೂ ಇದ್ದಾರೆ, ಮರಾಠಿಯಲ್ಲಿ ಮಾತನಾಡತಕ್ಕಂಥವರು ಇದ್ದಾರೆ, ತಮಿಳಿನಲ್ಲಿ ಮಾತನಾಡತಕ್ಕಂಥವರು ಏನಿದ್ದಾರೆ ಅವರೆಲ್ಲರಿಗೂ ಸಹ ಕನ್ನಡವನ್ನು ಕಲಿಸಲಿಕ್ಕೆ ನೀವು ತೆಗೆದುಕೊಂಡಿರತಕ್ಕಂಥ ಕಾರ್ಯಕ್ರಮ ಏನು? ಇನ್ನು ಈ ಸದನದ ಹಿರಿಯ ಸದಸ್ಯರಾಗಿರತಕ್ಕಂಥಹ ಮಾನ್ಯ ಅಜೀಜ್‌ಸೇಠ್ ರವರು ಅನೇಕ ಸಾರಿ ನಮ್ಮ ಉರ್ದು ಶಾಲೆಗಳಲ್ಲಿ ಕನ್ನಡದ ಅಧ್ಯಾಪಕರುಗಳು ಇಲ್ಲ ಎಂದು

ಒತ್ತಾಯ ಮಾಡಿದ್ದಾರೆ. ಇವತ್ತೇ ನೀವು ಕನ್ನಡವನ್ನು ಕಲಿಸಬೇಕು ಎಂದು ಇದ್ದರೆ ಅಲ್ಲಿಗೆ ಉಪಾಧ್ಯಾಯರನ್ನು ಕೊಡಿ. ಅಧ್ಯಕ್ಷರೇ ತಮಗೆ ಗೊತ್ತಿದೆ, ನೂರು ದಿನದ ಒಳಗಡೆ ಉಪಾಧ್ಯಾಯರುಗಳ ಮತ್ತು ವೈದ್ಯರುಗಳ ವೇಕೆನ್ಸಿಗಳನ್ನು ಫಿಲಪ್ ಮಾಡುತ್ತೇವೆ ಎಂದು ಹೇಳಿದರು, ನೂರು ದಿನ ಮುಗಿಯಿತು, ಏನು ಆಗಿಲ್ಲ. ಕೊನೆಯ ಪಕ್ಷ ಕನ್ನಡಕ್ಕೆ ಸಂಬಂಧ ಪಟ್ಟ ಮೇಸ್ಟರು, ಉಪಾಧ್ಯಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಇವರು ಹಾಕಿದ್ದಾರೆಯೇ? ಎಂದು ತಿಳಿಸಬೇಕಾಗುತ್ತದೆ. ಅದು ಅಷ್ಟೇ ಅಲ್ಲ ಕನ್ನಡ ಬಾರದೇ ಇರತಕ್ಕ ಅಧಿಕಾರಿಗಳು ಯಾರು ಇದ್ದಾರೆ, ಇವರಿಗೆ ಕನ್ನಡ ಕಲಿಸಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇವರು ನೆನ್ನೆ ದಿನ ನಾಳೆಯಿಂದ ಕನ್ನಡ ಜಾರಿಗೆ ಬರುತ್ತದೆ, ತಾಲೂಕು ಕಛೇರಿಯಲ್ಲಿ, ನ್ಯಾಯಾಲಯಗಳಲ್ಲಿ, ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ, ವಿಧಾನಸೌಧದಲ್ಲಿ ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ, ಎಲ್ಲಾ ವ್ಯವಹಾರಗಳನ್ನು ಕನ್ನಡದಲ್ಲಿ ನಡೆಸುವುದಕ್ಕೆ ನಾವು ಈ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಎಂದು ಹೇಳಿದ್ದರು. ಈ ಕೆಲಸವನ್ನು ಅವರು ಮಾಡಿದ್ದರೆ ನಾವು ಅತ್ಯಂತ ತುಂಬು ಹೃದಯದಿಂದ ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತಿದ್ದೆವು. ಆದರೆ ಆ ಕೆಲಸ ಅವರು ಮಾಡಲಿಲ್ಲ. ಇವತ್ತು ನಮಗೆ ಅವರು ಇನ್ನೂ ಸಿಕ್ಕಿಲ್ಲ. ನಾವಾದರು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಈ ಸದನದ ಮೂಲಕ ಏನೆಂದರೆ, ಇವತ್ತಿನ ದಿವಸದಿಂದಲೇ ಪ್ರಾಮಾಣಿಕವಾಗಿ ಅವರು ಪ್ರಯತ್ನ ಮಾಡಿ ಈ ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಸಾಧ್ಯ ಇದೆ. ತಾವು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಆ ಕಾರ್ಯಕ್ರಮಗಳಿಗೆ ಬೇಕಾಗಿರತಕ್ಕ ಹಣ ಬಹಳ ಮುಖ್ಯ. ಬರೀ ಭಾಷಣದಿಂದ ಆಗತಕ್ಕ ಕೆಲಸ ಅಲ್ಲ ಇದು. ಭಾಷಣವು ಬೇಕು, ಘೋಷಣೆಗಳು ಬೇಕು. ಆದರೆ ಅದಕ್ಕೆ ಬೇಕಾಗಿರತಕ್ಕ ಹಣದ ಸೌಕರ್ಯ, ಸವಲತ್ತು ಒದಗಿಸತಕ್ಕದ್ದು ಬಹಳ ಅಗತ್ಯ ಇದೆ. ಆ ಕಾರಣದಿಂದ ಮಾನ್ಯ ಮುಖ್ಯಮಂತ್ರಿಗಳಿಂದ ಸರ್ಕಾರದಿಂದ ಹೇಳಿಕೆ ಕೊಡಿಸಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ. ಹೀಗೆ ಒತ್ತಾಯ ಮಾಡುತ್ತಾ ಇನ್ನೂ ಒಂದು ಬಹಳ ಮುಖ್ಯವಾದ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಇದು ಏನು ಎಂದರೆ ನಿನ್ನೆಯ ದಿನ ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಸದನಕ್ಕೆ ಹಕ್ಕುಚ್ಯುತಿ ಬರುವ ರೀತಿಯಲ್ಲಿ ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ರೀತಿಯಲ್ಲಿ ಒಂದು ಕೆಲಸವನ್ನು ಮಾಡಿದ್ದಾರೆ. ಡಾ. ಜೀವರಾಜ್ ಆಳ್ವ ಅವರು ವಾಟಾಳ್ ನಾಗರಾಜ್ ಅವರು ಬೆಂಗಳೂರಿನಲ್ಲಿ ಆಗಿರತಕ್ಕ ನಂಜುಂಡನ ಲಾಕಪ್ ಡೆತ್ ಏನು ಆಯಿತು. ಆ ಡೆತ್‌ನ ವಿಚಾರದಲ್ಲಿ ನಾವೆಲ್ಲ ನೋಡಿದ್ದೇನು ಎಂದರು. ಹಾಗಾದರೆ ಇವರು ಸೂಪರ್ ಡಿಜಿಪಿ ಯೇ ಮಾನ್ಯ ಮುಖ್ಯಮಂತ್ರಿಗಳು ಸಹ ನಮ್ಮ ಹಾಗೆ ಶಾಸಕರೇ. ಸಚಿವ ಸಂಪುಟದ ಸಹೋದ್ಯೋಗಿಗಳ ಮೇಲ್ವಿಚಾರಣೆ ಮಾಡುವುದರ ಜತೆಗೆ ಸರ್ಕಾರದ ಮೇಲ್ವಿಚಾರಣೆ ನೋಡತಕ್ಕ ಕೆಲಸ ಇರುವಾಗ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತಿರತಕ್ಕ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುವುದಕ್ಕೆ ಆಗುವುದಿಲ್ಲ ಅಥವಾ ಒಂದು ತನಿಖಾಧಿಕಾರಿ ಮಾಡತಕ್ಕ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ತಮಗೆ ಗೊತ್ತಿರತಕ್ಕ ವಿಚಾರ. ಇದು ಪ್ರಜಾತಂತ್ರದ ಒಂದು ಪದ್ಧತಿಯಲ್ಲ. ಮಾನ್ಯ ರಾಜಶೇಖರ ಮೂರ್ತಿಗಳೇ ತಾವು ಮಾನ್ಯ ಘೋರ್ಪಡೆಯವರೂ ಯಾಹ್ಯಾರವರು ಹಿರಿಯ ಸಚಿವ ಸಂಪುಟದಲ್ಲಿರ ತಕ್ಕ ಸದಸ್ಯರುಗಳು ತಾವೇ ಹೇಳಿ It is very very serious matter.

ನಿಮಗೆ ಹೇಳುತ್ತೇನೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಜವಾಬ್ದಾರಿ ಶಾಸಕರು, ತಾವು ಅವತ್ತಿನ ದಿವಸ ಸಭೆಯಲ್ಲಿ ಇರಲಿಲ್ಲ. ನಂಜುಂಡನ ಕೊಲೆಯಲ್ಲಿ ಪೊಲೀಸ್ ಅಧಿಕಾರಿಗಳೇ ಅಕ್ರಮ ಮಾಡಿದ್ದಾರೆ ಎಂದು ಹೇಳಿದಾಗ ನಮಗೆ ಆಶ್ವಾಸನೆ ಕೊಟ್ಟಿದ್ದರು. ನೀವು ವಿರೋಧಪಕ್ಷದವರು ಬಾಯಿಗೆ ಬಂದ ಹಾಗೆ ಮಾತನಾಡುತ್ತೀರಿ. ನೀವು ನನ್ನ ಮೇಲೆ ವಿಶ್ವಾಸ ಇಡಿ, ನನ್ನ ಮೇಲೆ ವಿಶ್ವಾಸ ಇಡಿ ಎಂದು ಮೂರು ಸಾರಿ ಹೇಳಿದ್ದರು. ನಾವು ಮುಖ್ಯಮಂತ್ರಿಗಳ ಮೇಲೆ ವಿಶ್ವಾಸ ಇಡಲೇ ಬೇಕಾಗುತ್ತದೆ. ವಿಶ್ವಾಸಕ್ಕೆ ಇವರು ಮಾಡಿರತಕ್ಕದ್ದು ಏನು? ಇವತ್ತು ಅಲ್ಲಿರತಕ್ಕ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಶಾಂತಪ್ಪ ಎನ್ನ ತಕ್ಕವರು ಬೆಂಗಳೂರು ನಗರದ ಏಳನೆಯ ಅಡಿಷನಲ್ ಮೆಟ್ರೊಪಾಲಿಟನ್ ನ್ಯಾಯಾಧೀಶರ ಮನೆಗೆ ಹೋಗಿದ್ದಾರೆ.

ಸಂಬಂಧ ಪಟ್ಟ ಪೊಲೀಸ್ ಅಧಿಕಾರಿಗಳು ಬೆಳಿಗ್ಗೆ ಅವನನ್ನು 6 ಗಂಟೆಗೆ ಡ್ಯೂಟಿಯಿಂದ ರಿಲೀವ್ ಮಾಡುವುದಕ್ಕೆ ತಯಾರು ಇರಲಿಲ್ಲ. ಅವನ ಜೀವಕ್ಕೆ ಬೆದರಿಕೆಯನ್ನು ಒಡ್ಡಿದ್ದಾರೆ. ನಾವು ಹೇಳಿದ ಕಡೆ ನೀನು ಸೈನ್ ಮಾಡು ಎಂದು ಹೇಳಿ ಅವನ ಜೀವಕ್ಕೆ ಬೆದರಿಕೆ ಹಾಕಿದ್ದಾರೆ. ಆಗ ಆತ ನೇರವಾಗಿ ನ್ಯಾಯಾಧೀಶರ ಹತ್ತಿರ ಹೋಗಿ ಏನು ಹೇಳಿದ್ದಾರೆ ಎಂದರೆ ಅವತ್ತಿನ ದಿವಸ ಪೊಲೀಸ್ ಠಾಣೆಯಲ್ಲಿ ಯಾರನ್ನೂ ಅರೆಸ್ಟ್ ಮಾಡಲಿಲ್ಲ ಎನ್ನತಕ್ಕದ್ದನ್ನು ಎಎಸ್‌ಐ ಚಿಕ್ಕಬೋರಯ್ಯ ಹೇಳು ಅಂತ ಹೇಳಿದರು ಎಂದು ಹೇಳಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳುತ್ತಾರೆ ? ಎಲ್ಲಾ ಕಡತಗಳನ್ನು ನಾನು ನೋಡಿದ್ದೇನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಎಲ್ಲಾ ಕಡತಗಳನ್ನು ನೋಡಿದ್ದೇವೆ ಎಂದು ಹೇಳಿ ಈ ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆ. ಪೊಲೀಸ್ ಕಾನ್‌ಸ್ಟೇಬಲ್ ಆಗಿರತಕ್ಕಂತ ಶಾಂತಯ್ಯ ಎನ್ನುವವರು ಮ್ಯಾಜಿಸ್ಟ್ರೇಟ್ ಮುಂದೆ ಹೋಗಿ ಅಫಿಡವಿಟ್ ಮಾಡಿ ಏನು ಹೇಳಿದ್ದಾರೆ, ''ಅರೆಸ್ಟ್ ಮಾಡಿದರು. ಒಬ್ಬನನ್ನು ಇಟ್ಟಿದ್ದಾರೆ. ಇಟ್ಟಿರುವುದರ ಜೊತೆ ಆತ ಸತ್ತುಹೋದ ಎಂದು ಗೊತ್ತಾಯಿತು. ಆದಾಗ್ಯೂ ಆ ವ್ಯಕ್ತಿಯನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ದು ಬದುಕಿಸಲು ಮಾಡಿದ ಯತ್ನ ಫಲ ನೀಡಲಿಲ್ಲ. ಅಂದರೆ ಅವನು ಸತ್ತ ಮೇಲೆ ಸಾಯುವ ಸ್ಥಿತಿಯಲ್ಲಿ ಕೊನೆಯ ಉಸಿರು ಎಳೆಯತಕ್ಕ ಸಂದರ್ಭದಲ್ಲಿ ಆಸ್ಪತ್ರೆಗೆ ಅವನನ್ನು ಸಾಗಿಸಿ ಬದುಕಿಸುವುದಕ್ಕೆ ಅಧಿಕಾರಿಗಳು ಪ್ರಯತ್ನ ಮಾಡಿದ್ದಾರೆ. ಆದರೆ ಆತ ಬದುಕಲಿಲ್ಲ. ಮತ್ತೆ ಪೊಲೀಸ್ ಠಾಣೆಗೆ ಅವನ ಶವವನ್ನು ತೆಗೆದುಕೊಂಡು ಬಂದಿದ್ದಾರೆ. ನಾನು ಅನಾವಶ್ಯಕವಾಗಿ ಮಾತನಾಡತಕ್ಕವನಲ್ಲ ಎಂದು ತಮಗೆ ಗೊತ್ತಿದೆ. ಮೊನ್ನೆ ದಿವಸ ಗೋಪಾಲಕೃಷ್ಣ ಎನ್ನುವ ಬೆಂಗಳೂರಿನ ಒಬ್ಬ ಜವಾಬ್ದಾರಿ ನಾಗರಿಕರು ನನ್ನ ಹತ್ತಿರ ಬಂದಿದ್ದರು. ಅವರು ನನಗೆ ಹೇಳಿದರು 'ಪೋಲೀಸ್ ಠಾಣೆಯಲ್ಲಿ ನಂಜುಂಡಸ್ವಾಮಿ ಎನ್ನತಕ್ಕಂಥವರು ಸಾಯತಕ್ಕಂಥ ಸಂದರ್ಭದಲ್ಲಿ ಅವರಿಗೆ ಆದಂಥ ಹಿಂಸೆಯನ್ನು ನೋಡಿದಂಥವರು ಒಬ್ಬರಿದ್ದಾರೆ, ಅವರೂ ಸಹ ಒಬ್ಬ ಅಪರಾಧಿಯಾಗಿ ಲಾಕಪ್‌ನಲ್ಲಿದ್ದರು. ಅವರು ಬಂದು ನನಗೆ ರಕ್ಷಣೆ ಕೊಟ್ಟರೆ ನಾನು ಇದನ್ನು ತಿಳಿಸುತ್ತೇನೆ ಎಂದು . ಆಗ ನಾನು ಅವರ ಮಾತನ್ನು ನಂಬಲಿಲ್ಲ. ಏಕೆಂದರೆ, ನಾನು ವಿರೋಧಪಕ್ಷದಲ್ಲಿರುವಾಗ ಬಹಳಷ್ಟು ಜನರು ಬಂದು ಬಹಳಷ್ಟು ಜನರ ಬಗ್ಗೆ ಏನು ಬೇಕಾದರೂ ಹೇಳುತ್ತಾರೆ. ನಾನು ಇದನ್ನು ಹೇಗೆ ನಂಬುವುದು ? ಆದರೂ ಸಹ ನಾನು ಅವರಿಗೆ ಭರವಸೆ ಕೊಟ್ಟೆ. ಏನೆಂದರೆ ಇವೊತ್ತು ಮಾನ್ಯ ಮುಖ್ಯ ಮಂತ್ರಿಗಳು ನಮಗೆಲ್ಲಾ ಸದನದಲ್ಲಿ ಒಂದು ವಿಚಾರವನ್ನು ಹೇಳಬೇಕೆಂದಿದ್ದಾರೆ. ಅದಕ್ಕೋಸ್ಕರ ನಾನು ಕಾಯುತ್ತೇನೆ. ಅವರು ಏನು ಉತ್ತರ ಹೇಳುತ್ತಾರೆಂದು ನೋಡೋಣ. ಎಂದು ಅವರಿಗೆ ಹೇಳಿ ಕಳುಹಿಸಿದೆ. ನಂಜುಂಡಯ್ಯ ಎಂಬುವವರಿಗೆ ಚಿತ್ರಹಿಂಸೆ ಕೊಡುವಾಗ ನೋಡಿರುವ ಒಬ್ಬ ವ್ಯಕ್ತಿ ಯಾರಿದ್ದಾರೋ, ಅವರು ಇವೊತ್ತಿನ ದಿವಸ ಪೋಲೀಸ್ ಅಧಿಕಾರಿಗಳ ಮುಂದೆ ಹೋಗಿ ಸಾಕ್ಷ್ಯ ಕೊಡವುದಕ್ಕೂ ಸಹ ತಯಾರಿದ್ದಾರೆ. ಆದರೆ, ಅವರಿಗೆ ಜೀವದ ಮೇಲೆ ಭಯವಿದೆ. ಅವರಿಗೆ ರಕ್ಷಣೆ ಕೊಡಬೇಕಾಗುತ್ತದೆ. 'ನಾನು ರೂಲ್ ಆಫ್ ಲಾ ಎಸ್ಟಾಬ್ಲಿಶ್' ಮಾಡುತ್ತೇನೆ. ಕಾನೂನು ಪ್ರಕಾರವಾಗಿರತಕ್ಕಂಥ ಸರ್ಕಾರ ಕೊಡುತ್ತೇನೆ. ಎಂದು ಹೇಳಿಕೊಳ್ಳುವ ನಮ್ಮ ಮುಖ್ಯಮಂತ್ರಿಗಳು ಇವೊತ್ತು ಈ ಸದನವನ್ನು ತಪ್ಪುದಾರಿಗೆ ಎಳೆಯತಕ್ಕಂಥ ಕೆಲಸ ಮಾಡಿದ್ದಾರೆ. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳು ಬೇಷರತ್ತಾಗಿ ಕ್ಷಮಾಪಣೆ ಕೇಳಬೇಕು. ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಜನರು, ಸಿ.ಓ.ಡಿ. ಪೋಲೀಸ್ ಆಗಲಿ ಅಥವಾ ವಿಚಾರಣೆ ಮಾಡತಕ್ಕಂಥ ತನಿಖಾ ಆಯೋಗಗಳ ಬಗ್ಗೆ ನಂಬಿಕೆ ಕಳೆದುಕೊಳ್ಳತಕ್ಕಂಥಾದ್ದು ಇಂತಹ ವಿಚಾರಗಳಿಂದಲೇ, ಈಗಾಗಲೇ ಅಲ್ಲಿರತಕ್ಕಂಥ ಅಧಿಕಾರಿಗಳನ್ನು ನೇರವಾಗಿ ಅಮಾನತ್ತಿನಲ್ಲಿಡ ಬೇಕಾಗಿತ್ತು. ಆದರೆ, ಈ ರೀತಿ ಮಾಡುವುದಕ್ಕೆ ನಮ್ಮ ಮುಖ್ಯಮಂತ್ರಿಗಳು ಹೋಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :-(ಸದನದೊಳಗೆ ಕೈಯಲ್ಲಿ ಬಣ್ಣದ ಡಬ್ಬ ಹಾಗೂ ಬ್ರಷ್‌ಗಳೊಂದಿಗೆ ಪ್ರವೇಶಿಸುತ್ತಾ) ಸ್ವಾಮಿ, ಅಧ್ಯಕ್ಷರೇ ನಾವು ಬಣ್ಣ ಬಳಿಯುವುದಕ್ಕೆ ಇವರು (ಪೋಲೀಸರು) ನಮಗೆ ಅವಕಾಶ ಕೊಡುತ್ತಿಲ್ಲ, ನಮ್ಮನ್ನು ಬಂಧಿಸುವುದಕ್ಕೆ ಹೊರಟಿದ್ದಾರೆ, ನಮಗೆ ಪೋಲೀಸರು ತೊಂದರೆ ಕೊಡುತ್ತಿದ್ದಾರೆ. ಈ ತರಹ ಅವರು ಅವಿವೇಕತನದಿಂದ ವರ್ತಿಸಿದರೆ ನಮಗೆ ಕಷ್ಟವಾಗುತ್ತದೆ ಇದು ಸರಿಯಲ್ಲ. ನಾವು ಅವರಿಂದ ತಪ್ಪಿಸಿಕೊಂಡು ಈ ಸದನದೊಳಗೆ ಬರಬೇಕಾಗಿದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :- ಸರ್ಕಾರಕ್ಕಂತೂ ಮಾಹಿತಿಯಿಲ್ಲ, ಇವರು ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :-ಪಾಯಿಂಟ್ ಆಫ್ ಆರ್ಡರ್, ಮಾನ್ಯ ಅಧ್ಯಕ್ಷರೆ, ಕನ್ನಡದ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ, ಪ್ರೊ: ನಂಜುಂಡಸ್ವಾಮಿಯವರಿಗೆ ಹಾಗೂ ಬಾಬಾಗೌಡ ರುದ್ರಗೌಡ ಪಾಟೀಲರುಗಳಿಗೆ ಎಷ್ಟು ಅಭಿಮಾನವಿದೆಯೋ, ಅಷ್ಟೇ ಅಭಿಮಾನ ನನಗೂ ಕೂಡ ಇದೆ. (ಇಂಗ್ಲೀಷ್ ನಾಮಫಲಕಗಳನ್ನು ಅಳಿಸುವುದಕ್ಕೆ ಸದನಕ್ಕೆ ಬಣ್ಣದ ಡಬ್ಬ, ಕುಂಚವನ್ನು ಹಿಡಿದುಕೊಂಡು ಬಂದರೆ ಲಕ್ಷಣವಾದೀತೆ ? ಮತ್ತು ಸದನದೊಳಗೆ ಯಾವಾಗಲೂ ಈ ತರಹ ವಸ್ತುಗಳನ್ನು ತರಬಾರದೆಂಬ ನಿಯಮ ಇದೆ. ಅದನ್ನು ಪ್ರದರ್ಶನ ಮಾಡತಕ್ಕಾಂಥದ್ದು ಹೊರಗಡೆ ಮಾಡತಕ್ಕಂಥ ಕೆಲಸವಾಗಿದೆ. ಇದು ಚಳುವಳಿಗೆ ಸಂಬಂಧಪಟ್ಟಂಥ ವಿಚಾರಗಳು. ಚಳುವಳಿ ಮಾಡುವಂಥ ಸಂದರ್ಭದಲ್ಲಿ ಈ ವಸ್ತುಗಳನ್ನು ಹೊರಗಡೆ ಬಳಸಬೇಕೇ ವಿನಃ ಸದನದೊಳಗೆ ತೆಗದುಕೊಂಡು ಬಂದು ಬಣ್ಣದ ಡಬ್ಬ ಹಾಗೂ ಕುಂಚಗಳನ್ನು ಪ್ರದರ್ಶಿಸುವುದು ಈ ಸದನಕ್ಕೆ ಗೌರವ ತರತಕ್ಕಂಥಾದ್ದಲ್ಲ. ದಯವಿಟ್ಟು ಆ ವಸ್ತುಗಳನ್ನು ಹೊರಗೆ ಹಾಕಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರ ಏನು ಹೇಳುತ್ತಿದೆ ? ಇವೊತ್ತಿನ ದಿವಸದಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂದು ಸರ್ಕಾರ ಹೇಳಿದೆ. ರಸ್ತೆಗಳಲ್ಲಿರುವ ಇಂಗ್ಲೀಷ್ ನಾಮಫಲಕಗಳಿಗೆ ನಾವು ಬಣ್ಣ ಬಳಿಯಲು ಹೋದರೆ ಪೋಲೀಸರು ನಮ್ಮನ್ನು ದಸ್ತಗಿರಿ ಮಾಡುವುದಕ್ಕೆ ಬರುತ್ತಿದ್ದಾರೆ. ಅಲ್ಲಿಂದ ನಾವು ತಪ್ಪಿಸಿಕೊಂಡು ತಮ್ಮ ರಕ್ಷಣೆ ಕೋರಿ ಇಲ್ಲಿಗೆ ಬರಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ :- ಇದರ ಬಗ್ಗೆ ಸರ್ಕಾರವನ್ನು ತರಾಟೆಗೆ ತೆಗದುಕೊಂಡು ಬೇಕಾದ್ದು ಮಾಡಲಿ. ಅದರ ಬದಲು ಬಣ್ಣದ ಡಬ್ಬ, ಕುಂಚವನ್ನು ಹಿಡಿದುಕೊಂಡು ಬಂದು ಇಲ್ಲಿಯೂ ಅದೇ ಕೆಲಸವನ್ನು ಮಾಡಿದರೆ ಏನಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್ :- ಹಿಂದೆ ಕಾಗೋಡು ತಿಮ್ಮಪ್ಪನವರೂ, ಸಹ ನಮ್ಮ ಜೊತೆ ಇದರ ವಿಷಯವಾಗಿ ಬಂದಿದ್ದರು. ಆದುದರಿಂದ, ನಾವು ಅವರನ್ನು ಕರೆಯುತ್ತಿದ್ದೇವೆ, ತಿಮ್ಮಪ್ಪನವರೇ ದಯವಿಟ್ಟು ಬನ್ನಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ಬೇಕಾದರೆ, ಅವರು ಈ ಕೆಲಸ ಮಾಡಿಕೊಂಡು ಇಲ್ಲಿ ಕುಳಿತುಕೊಳ್ಳಲಿ, ನಾವು ಹೊರಗಡೆ ಹೋಗುತ್ತೇವೆ. ಇದು ಸದನಕ್ಕೆ ಗೌರವ ತರುವಂಥ ವಿಷಯವೇ ?

ಅಧ್ಯಕ್ಷರು :- ವಾಟಾಳ್ ನಾಗರಾಜ್‌ರವರೇ, ಕುಳಿತುಕೊಳ್ಳಿ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ, ಅವರು ಇಲ್ಲಿಗೆ ಬಂದ ತಕ್ಷಣ, ಇದರ ಬಗ್ಗೆ ಹೇಳಿಕೆ ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು :- ಮಂತ್ರಿಗಳು ಬರಲಿ ಅನಂತರ ಹೇಳಿಕೆಯನ್ನು ಕೊಡುತ್ತಾರೆ. ಆದ್ದರಿಂದ ದಯಮಾಡಿ ಎಲ್ಲಾರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ವಾಟಾಳ್ ನಾಗರಾಜ್‌ರವರೆ, ಕಾಗೋಡು ತಿಮ್ಮಪ್ಪನವರೇ, ಬಾಬಾಗೌಡರವರೆ ದಯಮಾಡಿ ಕುಳಿತುಕೊಳ್ಳಿ, ಮುಖ್ಯ ಮಂತ್ರಿಗಳು ಬರಲಿ ಅನಂತರ ಇದರ ಬಗ್ಗೆ ಹೇಳಿಕೆಯನ್ನು ಕೊಡಿಸುತ್ತೇನೆ.

(ಗೊಂದಲ)

ಅಧ್ಯಕ್ಷರು :-ತಾವೆಲ್ಲರೂ ನಿಂತು ಈ ರೀತಿ ಮಾತನಾಡಿದರೆ ಯಾವುದೂ ಕಡತಕ್ಕೆ ಹೋಗುವುದಿಲ್ಲ. ಅದಲ್ಲದೆ ಅದು ನನಗೆ ಹೇಗೆ ಅರ್ಥವಾಗಬೇಕು ? ಎಲ್ಲರೂ ಸಹ ಕುಳಿತುಕೊಳ್ಳಿ, ಏನಾದರೂ ಹೇಳಬೇಕಾದರೆ ಒಬ್ಬರು ಹೇಳಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ :-ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ವಾಟಾಳ್ ನಾಗರಾಜ್‌ರವರು ತಂದಿರುವುದು ಏನು? ಅದು 47 ರೈಫಲ್ ಅಲ್ಲವೆಂದು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಅವರು ಈ ರೀತಿ ಮಾಡುವುದಕ್ಕೆ ಬಹಳ ಮುಖ್ಯವಾದ ಕಾರಣವೇನೆಂದರೆ ಇದನ್ನು ನಮ್ಮ ಶಾಸಕರು ಮತ್ತು ಮಂತ್ರಿಗಳು ತಿಳಿದುಕೊಳ್ಳಬೇಕು. ಅದೇನೆಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಸನ್ಮಾನ್ಯ ವಿಶ್ವನಾಥ್‌ರವರು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡುತ್ತಾ ಏಪ್ರಿಲ್ ಒಂದರಿಂದ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುತ್ತೇವೆ ಇಲ್ಲದಿದ್ದರೆ ವಿಧಾನಸೌಧದಲ್ಲಿರುವ ಎಲ್ಲಾ ಇಂಗ್ಲೀಷ್ ನಾಮಫಲಕಗಳಿಗೂ ಬಣ್ಣ ಬಳಿಯುತ್ತೇವೆಂದು ಹೇಳಿದ್ದಾರೆ. ಆದುದರಿಂದ ಇವತ್ತು ವಾಟಾಳ್ ನಾಗರಾಜ್ ಅವರು ಪ್ರೊ : ನಂಜುಂಡಸ್ವಾಮಿಯವರು ಮತ್ತು ಬಾಬಾಗೌಡ ಪಾಟೀಲರವರು ಇದನ್ನು ಮಾಡಿದ್ದಾರೆ. ಈ ಮೂರೇ ಜನರು ಇದನ್ನು ಮಾಡತಕ್ಕ ಕೆಲಸವಲ್ಲ, ನಾವೆಲ್ಲರೂ ಸಹ ಈ ಕೆಲಸವನ್ನು ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :-ಅವರು ತಂದಿರುವುದನ್ನು ಹೊರಗೆ ಹಾಕಬೇಕು.

(ಗೊಂದಲ)

ಶ್ರೀ ಪಿ.ಜಿ. ಆರ್.ಸಿಂಧ್ಯ :- ಅದನ್ನು ಹೊರಗೆ ಹಾಕಿದರೆ ನಾವು ಹೊರಗೆ ಹೋಗುತ್ತೇವೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಬಣ್ಣ ಬಳಿಯುವುದನ್ನು ಹೊರಗೆ ಹಾಕದಿದ್ದರೆ ನಾವು ಇಲ್ಲಿ ಭಾಗವಹಿಸುವುದಿಲ್ಲ.

(ಗೊಂದಲ)

ಅಧ್ಯಕ್ಷರು :- ನನಗೆ ಏನೂ ಅರ್ಥವಾಗುತ್ತಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ :- ತಾವುಗಳು ಮಾನ್ಯ ವಾಟಾಳ್‌ನಾಗರಾಜ್ ಮತ್ತು ಬಾಬಾ ಗೌಡಪಾಟೀಲರ ಭಾವನೆಯನ್ನು ಅರ್ಥ ಮಾಡಿಕೊಳ್ಳಬೇಕು. ಅವರ ಭಾವನೆ ಏನು ಇದೆ ಎಂಬುದನ್ನು ತಿಳಿದುಕೊಳ್ಳಬೇಕು. ಅವರಲ್ಲಿ ಯಾವ ದುರುದ್ದೇಶವೂ ಇಲ್ಲ. ಯಾವ ಗಲಾಟೆಯನ್ನು ಮಾಡಬೇಕೆಂಬ ಉದ್ದೇಶವೂ ಇಲ್ಲ.

ಡಾ : ಜೀವರಾಜ್‌ಆಳ್ವ:- ಅವರುಗಳು ಸಾಂಕೇತಿಕವಾಗಿ ಏನು ಮಾಡುತ್ತಿದ್ದಾರೆ ಅದು ಸರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ತಿಮ್ಮಪ್ಪನವರೇ ನಾವು ನೀವು ಎಲ್ಲಾ ಒಟ್ಟಿಗೆ ಇದ್ದವರು ನೀವು ಏತಕ್ಕೆ ಹೀಗೆ ಹೇಳುತ್ತಿದ್ದೀರಿ ?

ಶ್ರೀ ಕಾಗೋಡು ತಿಮ್ಮಪ್ಪ :- ಇದು ವಿಚಾರ ಮಾಡತಕ್ಕಂಥ ಪ್ರಶ್ನೆಯಾಗಿದೆ. ಬಣ್ಣದ ಡಬ್ಬವನ್ನು ತೆಗೆದುಕೊಂಡು ಬಂದು ಇಲ್ಲಿ ಬಳಿಯುತ್ತೇನೆಂದರೆ ಇದು ಸಭೆಯೇ ? ಶಾಸನಸಭೆಯೇ ಇದು ? ಚಳುವಳಿಯನ್ನು ಮಾಡುವುದಕ್ಕೆ ಇದು ಜಾಗವೇ ?

ಶ್ರೀ ಪಿ. ಆರ್. ಸಿಂಧ್ಯ :- ಅರೆಸ್ಟ್ ಮಾಡುವುದಕ್ಕೆ ಹೋದುದಕ್ಕೆ ನಮಗೆ ರಕ್ಷಣೆ ಮಾಡಬೇಕೆಂದು ಇಲ್ಲಿಗೆ ಬಂದಿದ್ದಾರೆ.

ಡಾ : ಎನ್. ಬಿ. ನಂಜಪ್ಪ :- ಏನು ಬೇಕಾದರೂ ಪ್ರದರ್ಶನ ಮಾಡಬಹುದೆಂದರೆ, ಅಪ್ಪಣೆ ಕೊಡುವುದಾದರೆ ನಾವು ಬೇರೆ ವಸ್ತುಗಳನ್ನು ತೆಗೆದುಕೊಂಡು ಬರುತ್ತೇವೆ. ಅದಕ್ಕೇನಾದರೂ ಪರ್ಮಿಷನ್ ಕೊಡುತ್ತೀರಾ ? ಹೀಗೆ ಸದನದಲ್ಲಿ ಈ ತರಹ ಸಾಮಾನುಗಳನ್ನೆಲ್ಲ ಹೊತ್ತು ಕೊಂಡು ಬರುವುದು ಬಾಟಲನ್ನು ಹೊತ್ತುಕೊಂಡು ಬರುವುದು. ಗಡಿಗೆ ಹೊತ್ತುಕೊಂಡು ಬರುವುದು ಯಾವ ಸಂಪ್ರದಾಯ ? ಇದಕ್ಕೆ ಇತಿಶ್ರೀ ಹಾಡಬೇಕು.

(ಗೊಂದಲ)

ಶ್ರೀ ಆರ್ ದಯಾನಂದರಾವ್ :- ಇದಕ್ಕೆ ಒಂದು ಮುಕ್ತಾಯ ಮಾಡಬೇಕು. ಇದು ಚಾಸ್ತಿಯಾಯಿತು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ನಂಜುಂಡಸ್ವಾಮಿಯವರೇ ಸಭೆಯಲ್ಲಿ ಇಂಗ್ಲೀಷ್‌ನಲ್ಲಿಯೇ ಮಾತನಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ.

ಶ್ರೀಮತಿ ಮೋಟಮ್ಮ :- ಮಾನ್ಯ ಚಂದ್ರೇಗೌಡರು ಅಧ್ಯಕ್ಷರಾಗಿದ್ದವರು. ಅವರು ಏನು ಹೇಳುತ್ತಾರೋ ಹೇಳಲಿ.

ಅಧ್ಯಕ್ಷರು : ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ನೀವು ಕುಳಿತುಕೊಳ್ಳಿ.

ಶ್ರೀ ಡಿ. ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ನನ್ನ ವಿಧಿಬಿಂದು ಇಷ್ಟೇ ಸದನದಲ್ಲಿ ಏನು ನಡೆಯುತ್ತಿದೇ ಎನ್ನುವುದನ್ನು ತಾವು ನಮಗೆ ತಿಳುವಳಿಕೆಯನ್ನು ಕೊಟ್ಟರೆ ಆ ವಿಚಾರದಲ್ಲಿ ಚರ್ಚೆ ಮಾಡೋಣ. ಯಾವ ವಿಷಯಕ್ಕೆ ಎಲ್ಲಿ ಹೇಗೆ ಪ್ರಸ್ತಾಪ ಮಾಡಬೇಕೆನ್ನುವುದಕ್ಕೆ ಕೆಲವು ನಿಯಮಗಳಿವೆ. ಈಗ ಒಮ್ಮೊಮ್ಮೆ ಈ ನಿಯಮಗಳ ವ್ಯಾಪ್ತಿಯನ್ನು ಮೀರಿ ಕೆಲವು ವಿಚಾರಗಳು ಪ್ರಸ್ತಾಪಕ್ಕೆ ಬರುತ್ತವೆ ಅದನ್ನು .....

(ಗೊಂದಲ)

ಅಧ್ಯಕ್ಷರು :- ಈ ರೀತಿ ಕಾರ್ಯಕಲಾಪಗಳನ್ನು ನಡೆಸಬೇಕೆಂದರೆ ನನಗೆ ಅಷ್ಟು ಮನಸ್ಸಿಗೆ ಸರಿ ಬರುವುದಿಲ್ಲ. ನಾನು ಹೇಳುತ್ತಿದ್ದೇನೆ ತಾವುಗಳು ಸ್ವಲ್ಪ ಶಾಂತರೀತಿಯಿಂದ ಕೇಳಬೇಕು. ತಾವೇ ಮಾತನಾಡುತ್ತಾ ಕುಳಿತರೆ ಕಾರ್ಯಕಲಾಪಗಳು ಏನೂ ನಡೆಯುವುದಿಲ್ಲ.

ಡಿ. ಬಿ. ಚಂದ್ರೇಗೌಡ :- ಅದಕ್ಕಾಗಿ ತಮ್ಮಲ್ಲಿ ಪ್ರಾರ್ಥಿಸುತ್ತೇನೆ, ಒಂದೊಂದು ಸಾರಿ ನಿಯಮಗಳನ್ನು ಮೀರಿದಂಥ ವಿಷಯಗಳು ಪ್ರಸ್ತಾಪಕ್ಕೆ ಬರುತ್ತವೆ. ವಾಟಾಳ್‌ನಾಗರಾಜ್‌ಅವರು ನಂಜುಂಡಸ್ವಾಮಿಯವರು

ಮತ್ತಿತರ ಮಿತ್ರರು ಇಂಥ ಒಂದು ನಿಯಮ ಮೀರಿದಂಥ ವಿಷಯವನ್ನು ತಮ್ಮ ಮುಂದೆ ತಂದಿದ್ದಾರೆ. ಅದು ಸದಸ್ಯರಿಗೆ ರಕ್ಷಣೆ ಇಲ್ಲವೆನ್ನುವುದು. ಕನ್ನಡದ ಬಗ್ಗೆ ನಾವು ಇಲ್ಲಿ ಎಷ್ಟು ಮಾತನಾಡುತ್ತೇವೋ ಅಷ್ಟೇ ಎಲ್ಲರೂ ಅಭಿಮಾನ ತುಂಬಿ ಮಾತನಾಡುತ್ತಾರೆ. ಅದು ಒಂದು ಭಾಗ. ಆ ಭಾಗವನ್ನು ಇದರ ಜೊತೆ ಸೇರಿಸಿ ಸದಸ್ಯರ ರಕ್ಷಣೆಯ ವಿಚಾರವನ್ನು ಮೊದಲು ತೆಗೆದುಕೊಂಡರೆ ಶ್ರೀ ವಾಟಾಳ್‌ನಾಗರಾಜ್ ಮತ್ತು ಹಿರಿಯ ಸದಸ್ಯರಿಗೆ ಯಾರಿಂದ ಅಡ್ಡಿ ಆಯಿತು ಏತಕ್ಕಾಯಿತು ಎಂಬುದು ಮೊದಲು ಇತ್ಯರ್ಥವಾದರೆ ಉಳಿದ ವಿಚಾರಗಳಿಗೆ ಮುಂದಕ್ಕೆ ಹೋಗಬಹುದೆಂದು ನನ್ನ ಅನಿಸಿಕೆ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ :- ಸನ್ಮಾನ್ಯ ಅಧ್ಯಕ್ಷರೇ, ಸದನ ಶುರುವಾದಾಗ ಹೌಸಿಂಗ್ ಬೋರ್ಡ್ ಅವ್ಯವಹಾರದ ಬಗ್ಗೆ ಬಿಜೆಪಿ ನಾಯಕರಾದ ಶ್ರೀ ಯಡಿಯೂರಪ್ಪನವರು ಪ್ರಸ್ತಾಪ ಮಾಡುತ್ತಿದ್ದರು. ಅದಾದ ಮೇಲೆ ಮಾನ್ಯ ಉಪನಾಯಕರು ಲಾಕಪ್ ಕೇಸ್ ಬಗ್ಗೆ ಪ್ರಸ್ತಾಪ ಮಾಡಿದರು. ಅದಕ್ಕಿಂತ ಮೊದಲು ವಾಟಾಳ್ ನಾಗರಾಜ್‌ರವರು ಕನ್ನಡದ ಅನುಷ್ಠಾನದ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಮಾಡಿದರು. ಹೀಗೆ ಅನೇಕ ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪವಾಗುತ್ತಿದೆ. ಯಾವ ವಿಷಯ ಯಾವ ನಿಯಮಾವಳಿ ಪ್ರಕಾರ, ಅಲ್ಲದಿದ್ದರೂ ಪರವಾಗಿಲ್ಲ. ತಾವು ಯಾವ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಯಾವ ವಿಷಯ ಚರ್ಚೆ ನಡೆಯುತ್ತಿದೆ. ಯಾವ ವಿಷಯದಲ್ಲಿ ನಾವು ಭಾಗವಹಿಸಬಹುದೆಂಬುದನ್ನು ತಾವು ತಿಳಿಸಬೇಕಾಗುತ್ತದೆ. ತಾವು ಸುಮ್ಮನೆ ಕುಳಿತಿದ್ದೀರಿ, ಉತ್ತರ ಕೊಡಬೇಕಾದ ಸರ್ಕಾರದವರು ರಾಜಗಾಂಭೀರ್ಯ ತಾಳಿದ್ದಾರೆ. ಅವರು ಇಷ್ಟೊಂದು ಕೂಗಾಡುತ್ತಿದ್ದಾರೆ, ನಾವು ಕನ್ನಡವನ್ನು ಅನುಷ್ಠಾನಕ್ಕೆ ತರುತ್ತೇವೆ ಎನ್ನುತ್ತಾರೋ ಅಥವಾ ತರುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೋ ಅಥವಾ ಏನಾದರೂ ತೊಂದರೆ ಇದೆ ಎಂದು ಹೇಳುತ್ತಾರೋ ಅಥವಾ ತಾವು ಹೇಳಿಲ್ಲವೆಂದು ಹೇಳುತ್ತಾರೋ, ಏನಾದರೂ ಒಂದು ಉತ್ತರವನ್ನು ಅವರು ಕೊಡಬೇಕು. ಅವರು ಗಾಂಭೀರ್ಯ ತಾಳಿ ಸುಮ್ಮನೆ ಕುಳಿತಿದ್ದಾರೆ. ತಾವು ಕೂಡ ಸುಮ್ಮನೆ ಯಾವ ತೀರ್ಮಾನವನ್ನು ತೆಗೆದುಕೊಳ್ಳದೇ ಕುಳಿತಿದ್ದೀರಿ ನಾವು ಏನು ಮಾಡಬೇಕು ? ನಾವು ಯಾವ ವಿಷಯದಲ್ಲಿ ಭಾಗವಹಿಸಬೇಕೆಂದು ದಯವಿಟ್ಟು ತಾವು ಮನವರಿಕೆ ಮಾಡಿಕೊಟ್ಟರೆ ಆ ವಿಷಯವನ್ನು ಕೈಗೆತ್ತಿಗೊಂಡು ನಾವು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆ. ದಯವಿಟ್ಟು ಈ ಬಗ್ಗೆ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ತಾವು ಸುಮ್ಮನೆ ಕುಳಿತಿದ್ದೀರಿ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ತಮ್ಮ ಅನುಮತಿ ತೆಗೆದುಕೊಂಡು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಅಗತ್ಯ ಇರುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ಸಮಂಜಸವಾದ ಉತ್ತರ ಕೊಡತಕ್ಕದ್ದು ಟ್ರಜರಿ ಬೆಂಚಿನಲ್ಲಿ ಕುಳಿತವರಿಗೆ ಬಿಟ್ಟದ್ದು. ನಮಗೆ ತಾವು ಮಾತನಾಡಲು ಅವಕಾಶ ಮಾಡಿಕೊಟ್ಟಿರುವಾಗ, ಸುಮ್ಮನೆ ಕುಳಿತುಕೊಂಡಿದ್ದೀರೆಂದು ತಮ್ಮನ್ನು ಕುರಿತು ಮಾತನಾಡುವುದು ಸರಿ ಅಗಲಿಕ್ಕೆ ಇಲ್ಲ. ಕೆಲವು ಸದಸ್ಯರಿಗೆ ಪ್ರಾಮುಖ್ಯತೆ ಅನ್ನಿಸೆದೇ ಇರಬಹುದು, ಕನ್ನಡದ ಅಗತ್ಯ ಇದೆ. ಬಂಧನ ಮಾಡುವುದಕ್ಕೆ ಹೋದಾಗ ಒಳಗಡೆ ಬಂದಿದ್ದಾರೆ. ಕುಂಚ ಡಬ್ಬ ಹಿಡಿದುಕೊಂಡು.....

(ಗೊಂದಲ)

ತಾವು ಸುಮ್ಮನೆ ಕುಳಿತಿದ್ದೀರಿ ಎನ್ನುವ ಮಾತನ್ನು ಒಪ್ಪುವುದಕ್ಕೆ ಸಿದ್ಧವಿಲ್ಲ. ಸದನದಲ್ಲಿ ನಿಯಮಾವಳಿ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ನಿಯಮಾವಳಿಯನ್ನು ಪಕ್ಕಕ್ಕೆ ತಳ್ಳಿ ಅವಕಾಶ ಮಾಡಿಕೊಡುವಂಥ ಅಧಿಕಾರವನ್ನು ಸಹ ಸದನ ನಿಮಗೆ ಕೊಟ್ಟಿದೆ. ಅದನ್ನು ಚಲಾಯಿಸಿ ನಮಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದನ್ನು ಪ್ರಶ್ನೆ ಮಾಡುವ ಹಕ್ಕು ಯಾರಿಗೂ ಇಲ್ಲ.

ಶ್ರೀ ವೈ.ಕೆ. ರಾಮಯ್ಯ :- ಬಹುಶಃ ಅವರು ಅಪಾರ್ಥ ಮಾಡಿಕೊಂಡರು ಎಂದು ಕಾಣುತ್ತದೆ. ಅವರು ಪ್ರಸ್ತಾಪ ಮಾಡಿದ್ದಕ್ಕೆ ನಾನು ಅಪವಾದ ಎತ್ತಿಲ್ಲ. ಯಾವ ವಿಷಯದಲ್ಲಿ ಚರ್ಚೆ ಆಗುತ್ತಿದೆ. ಅದು ಗೊತ್ತಾದರೆ ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ ಎಂದು ಹೇಳಿದೆ. ಶ್ರೀ ಯಡಿಯೂರಪ್ಪನವರು ಎತ್ತಿರುವ ಚರ್ಚೆಯಾಗುವುದಾದರೆ ಅದರಲ್ಲಿ ನಾನು ಭಾಗವಹಿಸುತ್ತೇನೆ. ಕನ್ನಡದ ಬಗ್ಗೆ ಚರ್ಚೆಯಾಗುವುದಾದರೆ ಅದರಲ್ಲಿ ಭಾಗವಹಿಸುತ್ತೇನೆ. ಅಥವಾ ಲಾಕಪ್ ಡೆತ್ ಕೇಸ್ ಬಗ್ಗೆ ಚರ್ಚೆಯಾಗುವುದಾದರೆ ಅದರಲ್ಲಿ ನಾನು ಭಾಗವಹಿಸುತ್ತೇನೆ ಎಂದು ಅಷ್ಟು ಹೇಳಿದೆನೇ ಹೊರತು ತಮ್ಮ ಮೇಲಾಗಲೀ, ಅವರ ಮೇಲಾಗಲೀ ನಾವು ಅಪವಾದ ಮಾಡಲಿಲ್ಲ. ಒಬ್ಬೊಬ್ಬರು 3-4 ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಯಾವುದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ? ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ್ದಕ್ಕೆ ಅವಕಾಶ ಮಾಡಿದ್ದರೆ ಅದಕ್ಕೆ ನಾನು ಸಿದ್ಧ, ಸಿಂಧ್ಯರವರು ಪ್ರಸ್ತಾಪ ಮಾಡಿದ್ದಕ್ಕೆ ಅವಕಾಶ ಮಾಡಿದ್ದರೆ ಅದಕ್ಕೂ ಸಿದ್ಧ, ವಾಟಾಳ್‌ನಾಗರಾಜ್ ಅವರ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅದಕ್ಕೂ ಸಹ ನಾನು ಸಿದ್ಧ, ದಯವಿಟ್ಟು ತಾವು ಅಪ್ಪಣೆ ಕೊಡಬೇಕೆಂದು ಕೇಳಿಕೊಂಡನೇ ಹೊರತು ಯಡಿಯೂರಪ್ಪನವರು ಹೇಳಿದ ಹಾಗೆ ತಾವು ಸುಮ್ಮನೆ ಕುಳಿತಿದ್ದೀರಿ ಎಂದು ಅಪವಾದ ಮಾಡುವ ದೃಷ್ಟಿಯಿಂದ ಹೇಳಲಿಲ್ಲ.

ಶ್ರೀ ಕೆ. ಎಸ್.ಈಶ್ವರಪ್ಪ :- ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಸರ್ಕಾರ ಮಲಗಿಕೊಂಡಿದೆ. ಸರ್ಕಾರ ಯಾವುದೇ ವಿಚಾರಗಳಿಗೆ ಮಧ್ಯೆ ಬರುತ್ತಿಲ್ಲ. ಏಕೆಂದರೆ ಆಶ್ರಯದ ಬಗ್ಗೆ ಕೂಡ ನಾವು ಮಾತನಾಡಿದೆವು. ತಾವು ಮುಖ್ಯ ಮಂತ್ರಿಗಳಿಂದ ಹೇಳಿಸುತ್ತೇನೆಂದಿರಿ. ಇದುವರೆಗೆ ಯಾವುದೇ ಸಚಿವರು ಉತ್ತರ ಕೊಡಲಿಲ್ಲ. ಸಿಂಧ್ಯರವರು ಲಾಕಪ್ ಕೇಸ್ ಬಗ್ಗೆ ಪ್ರಸ್ತಾಪ ಮಾಡಿದರೂ, ಅದಕ್ಕೂ ಉತ್ತರವಿಲ್ಲ. ನಾಗರಾಜ್ ಅವರು ಕನ್ನಡದ ಬಗ್ಗೆ ಪ್ರಸ್ತಾಪ ಮಾಡಿದರು. ಅದಕ್ಕೂ ಉತ್ತರವಿಲ್ಲ. ಕನ್ನಡದ ಬಗ್ಗೆ ಇಷ್ಟೊಂದು ಚರ್ಚೆ ನಡೆಯುತ್ತಿರಬೇಕಾದರೆ ಸಂಬಂಧಪಟ್ಟ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲೀ ಕನ್ನಡ ಅವರಿಗೆ ಬರುತ್ತದೆಯೋ ಅಥವಾ ಇಲ್ಲವೋ, ಮಾತು ಬರುತ್ತದೆಯೋ, ಇಲ್ಲವೋ ಎಂಬಂತೆ ಕುಳಿತಿದ್ದಾರೆ. ಇದಕ್ಕಿಂತ ನಾಚಿಕೆಗೇಡು ಇಲ್ಲ. ಅದಕ್ಕೋಸ್ಕರ ತಾವು ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕು. ಈ ಎಲ್ಲಾ ವಿಚಾರಗಳ ಬಗ್ಗೆ ಸರ್ಕಾರದ ಉತ್ತರ ಏನು ಎಂದು ಹೇಳಬೇಕು. ಸರ್ಕಾರ ಇದರ ಬಗ್ಗೆ ಸುಮ್ಮನೆ ಕುಳಿತರೆ ಅರ್ಥವೇನು ?

ಶ್ರೀ ಕಾಗೋಡು ತಿಮ್ಮಪ್ಪ :- ವಾಟಾಳ್‌ನಾಗರಾಜ್‌ರವರು ಈ ಸದನವನ್ನು ಪ್ರವೇಶ ಮಾಡತಕ್ಕಂಥ ಸಂದರ್ಭದಲ್ಲಿ ಬಾಬಾಗೌಡರು ಮತ್ತು ನಂಜುಂಡಸ್ವಾಮಿ ಜೊತೆಗೆ ಬಂದರು. ಒಂದು ಬಣ್ಣದ ಡಬ್ಬವನ್ನು ಮತ್ತು ಕುಂಚವನ್ನು ಹಿಡಿದುಕೊಂಡು ಪ್ರವೇಶ ಮಾಡಿದರು. ಈ ಸದನಕ್ಕೆ ಯಾರೇ ಸದಸ್ಯರುಪ್ರವೇಶ ಮಾಡುವುದಾದರೂ ಕೂಡ ಯಾವ ರೀತಿ ಪ್ರವೇಶ ಮಾಡಬೇಕು ಎನ್ನುವುದು ಇದೆ. ಬರುವಾಗ ಯಾವ ರೀತಿ ಆಯುಧವನ್ನಾಗಲೀ, ಇಲ್ಲಿ ಬಳಸುವುದಕ್ಕೆ ಸಾಧ್ಯ ಇಲ್ಲದೆ ಇರುವ ವಸ್ತುವನ್ನು ಆಗಲೀ, ಇಲ್ಲಿಗೇ ತರಬಾರದು ಎನ್ನತಕ್ಕಂಥ ನಿಯಮ ಇದೆ. ನಾನು ಕ್ರಿಯಾಲೋಪ ಎತ್ತಿ ಹೇಳಿದೆ. ಶ್ರೀಮಾನ್ ವಾಟಾಳ್‌ನಾಗರಾಜ್‌ರವರು ಕುಂಚ ಹಿಡಿದುಕೊಂಡು ಬರತಕ್ಕಂಥದ್ದು, ಬಣ್ಣದ ಡಬ್ಬಿಯನ್ನು ತರತಕ್ಕಂಥದ್ದನ್ನು ತಪ್ಪಿಸಿ ಎಂದು ನನಗೆ ಗೊತ್ತಿದೆ. ಅವರಿಗೆ ಕನ್ನಡವನ್ನು ಉಳಿಸಬೇಕು, ಇವತ್ತಿನಿಂದ ಕನ್ನಡ ಜಾಗೆಗೆ ಬರಬೇಕು ಎನ್ನುವ ಕಾರಣಕ್ಕಾಗಿ ಕನ್ನಡ ಭಾಷೆ ಬಿಟ್ಟು ಬೇರೆ ಯಾವ ಭಾಷೆಯಾದರೂ ಬಳಸಿದ್ದರೆ ಅದಕ್ಕೆ ಮಸಿ ಬಳಿಯಬೇಕು ಎನ್ನುವುದು ಅವರ ಚಳುವಳಿ. ಆ ಚಳುವಳಿ ಅವರ ಸ್ವತ್ತು ಎಂದು ಹೇಳುವವರು ನಾವು ಅಲ್ಲ. ಅಥವಾ ಬೇಡ ಎಂದು ಹೇಳುವವರು ಅಲ್ಲ. ಎಲ್ಲರಿಗೂ ಕನ್ನಡದ ಬಗ್ಗೆ ಅಭಿಮಾನ ಇರತಕ್ಕಂಥದ್ದರಲ್ಲಿ ಮತ್ತು ಕನ್ನಡದ ಬಗ್ಗೆ ಅಭಿಮಾನ ಇರುವ ಕಾರಣಕ್ಕಾಗಿ ಸರ್ಕಾರ ತೀರ್ಮಾನ ಮಾಡಿ ಘೋಷಣೆ ಮಾಡಿದೆ. ಆದರೆ ಈ ಸದನ ಚಳುವಳಿಯ ಅಂಗ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಚಳುವಳಿಯನ್ನು ಸದನದ ಹೊರಗೆ ಮಾಡಿಕೊಳ್ಳಿ. ಅದಕ್ಕೆ ಸರ್ಕಾರ ಉಂಟು. ಚಳುವಳಿ ಮಾಡುವವರು ಯಾವ ರೀತಿಯಾದರೂ ಮಾಡಿ.

ಶ್ರೀ ವೈ. ಕೆ. ರಾಮಯ್ಯ :-ಸಂಬಂಧ ಪಟ್ಟ ಮಂತ್ರಿಗಳು ಬಂದು ಕುಳಿತಿದ್ದಾರೆ. ಉತ್ತರ ಕೊಡಲು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ :- ಅಲ್ಲ ರಾಮಯ್ಯನವರೆ ಮಂತ್ರಿಗಳು ಹೇಳತಕ್ಕಂಥದ್ದು ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರ. ಈ ಸದನಕ್ಕೆ ಸಂಬಂಧಪಟ್ಟ ವಿಚಾರ ಈ ಸದನದ ಒಳಗೆ ಬಣ್ಣದ ಡಬ್ಬಿಯನ್ನು ತರಬೇಕಾದಂಥದ್ದು ಔಚಿತ್ಯವೇ?

ಶ್ರೀ ವಾಟಾಳ್‌ನಾಗರಾಜ್ :- ಹೊರಗಡೆ ಹೋದ ನಂತರ ಪೋಲೀಸನವರು ನಮ್ಮನ್ನು ಅಟ್ಟಿಸಿಕೊಂಡು ಬಂದಿದ್ದಾರೆ ನಮಗೆ ರಕ್ಷಣೆ ಕೊಡಿ ಎಂದು ಎಲ್ಲಿಗೆ ಹೋಗಬೇಕು, ಆದುದರಿಂದ ನಿಮ್ಮ ಹತ್ತಿರ ಬರಬೇಕಾಗಿದೆ. ರಕ್ಷಣೆಗೋಸ್ಕರ ಬಂದಿದ್ದೇವೆ ನಾವು ನನಗೆ ಈ ಸದನಕ್ಕೆ ಅಗೌರವ ಮಾಡಬೇಕು ಅಥವಾ ಅಡ್ಡಿ ಮಾಡಬೇಕೆಂದು ಬಂದಿಲ್ಲ ನಾನು.

(ಗೊಂದಲ)

ಡಾ: ಜೀವರಾಜ ಆಳ್ವ :- ಸಭಾಧ್ಯಕ್ಷರೇ, ಈಗ ಕಾರಣಾಂತರದಿಂದ ಹಲವಾರು ಬಾರಿ ಇಲ್ಲ ರಕ್ತ ಸಿಕ್ತ ಬಟ್ಟೆ ತಂದಿದ್ದೇವೆ, ಸೇಂದಿ ಬಂದಿದೆ, ಸಕ್ಕರೆ ಬಂದಿದೆ, ಅಕ್ಕಿ ಬಂದಿದೆ, ಇವತ್ತು ಬಂದಿರುವ ವಸ್ತು ಒಂದು ಸೈದ್ಧಾಂತಿಕವಾಗಿ ವಾಟಾಳ್‌ನಾಗರಾಜ್‌ರವರು ಕಾರಣಾಂತರದಿಂದ ತಂದಿದ್ದಾರೆ. ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಚಳುವಳಿಯನ್ನು ವಿಧಾನಸಭೆಯಲ್ಲಿ ಮಾಡಬಾರದೆಂಬುದನ್ನು ಒಪ್ಪಿದರೂ ಕೂಡ ಪೋಲೀಸರಿಂದ ರಕ್ಷಣೆ ಪಡೆಯಲಿಕ್ಕೋಸ್ಕರ ಶಾಸನ ಸಭೆಯೊಳಗೆ ಬಂದಿದ್ದಾರೆ. ನನ್ನ ಕೋರಿಕೆ 10 ನಿಮಿಷ ಸಭೆ ಅಡ್ಜೆನ್ ಮಾಡಿ, ಸದಸ್ಯರನ್ನು ಕರೆಯಿಸಿ ಏನೆಂದು ವಿಚಾರ ಮಾಡಿ ಪುನಃ ಸೇರೋಣ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ಡಬ್ಬ ಹೊರಗೆ ಹೋಗಬೇಕು. ಆಮೇಲೆ ಮಾತನಾಡೋಣ.

(ಗೊಂದಲ)

ಡಾ : ಎನ್. ಬಿ. ನಂಜಪ್ಪ :- ಡಬ್ಬವನ್ನು ಹೊರಗೆ ಕಳುಹಿಸಿದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು :- ಈ ರೀತಿ ಎಲ್ಲರೂ ನಿಂತರೆ ಯಾವುದೂ ರಿಕಾರ್ಡಗೆ ಹೋಗುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್ :- ಇವತ್ತು ವಿಧಾನಸಭೆಯಲ್ಲಿ ಬಣ್ಣ ಮತ್ತು ಬ್ರಷ್ ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಇದೊಂದು ಸಂಪ್ರದಾಯವಾಗುತ್ತದೆ. ದಯಮಾಡಿ ಅದನ್ನು ಹೊರಗೆ ಕಳುಹಿಸಬೇಕು.

Dr. N. B. Nanjappa : Mr. Speaker, Sir, Hon. Member Nagaraj is carrying a weapon.....

(ಗೊಂದಲ)

Dr. N.B. Nanjappa :- It is a very very dangerous weapon. It is not permitted in the House. It may go out of his hand. He may use that in emotion. We don't know.....

Prof: M.D. Nanjunda Swamy :- Sir, it is not a dangerous weapon.

(INTERRUPTION)

Dr. N.B.Nanjappa:- So, that weapon must go out. If you want to win the election you can win. We have accepted multi-party system. we don't agree with this type.....

ಈ ಸದನಕ್ಕೆ ಸಂತೆ ತರಹ ಸಾಮಾನುಗಳನ್ನು ತೆಗೆದುಕೊಂಡು ಬಂದು ಕುಳಿತುಕೊಂಡಿದ್ದಾರೆ. ಇದೇನು ಸಂತೆಯೇ? ವಿಧಾನಸಭೆ ಸಂತೆಯೇ ? ಎಲ್ಲಾ ತರಹ ಸಾಮಾನು ತರುವುದಕ್ಕೆ ? ನಾಚಿಕೆ ಪಡಬೇಕು.

ಪ್ರೊ: ಎಮ್. ಡಿ. ನಂಜುಂಡಸ್ವಾಮಿ :- ನೀವು ಈ ಕೆಲಸ ಮಾಡಿದ್ದರೆ, ಇದನ್ನು ಅವರು ತರಬೇಕಾಗಿರಲಿಲ್ಲ. ನಾಚಿಕೆ ಪಡಬೇಕಾದವರು ತಾವು.

ಅಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಾಟಾಳ್ ನಾಗರಾಜ್‌ರವರೇ ತಾವೇನು ಬ್ರಷ್ ಮತ್ತು ಬಣ್ಣ ತಂದಿದ್ದೀರಿ ಅದನ್ನು ಹೊರಗಡೆ ಇಟ್ಟು ಬನ್ನಿ. ಸರ್ಕಾರದ ಪರವಿಯಿಂದ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಇದರ ಬಗ್ಗೆ ಹೇಳಿಕೆ ಕೊಡುತ್ತೀರೋ ಹೇಗೆ ?

(ಗೊಂದಲ)

ಅಧ್ಯಕ್ಷರು :- ನಾನು ಅವರಿಗೆ ಹೇಳಿದ್ದೇನೆ. ಸರ್ಕಾರದ ಪರವಾಗಿ ತಾವು ಯಾರಾದರೂ ಹೇಳುತ್ತೀರಾ ?

ಶ್ರೀ ಹೆಚ್. ವಿಶ್ವನಾಥ್ :- ಮಾನ್ಯ ಅಧ್ಯಕ್ಷರೇ .....

(ಆಡಳಿತ ಪಕ್ಷದ ಸದಸ್ಯರಿಂದ ಇದಕ್ಕೆ ತೀವ್ರ ಪ್ರತಿಭಟನೆ ವ್ಯಕ್ತವಾಯಿತು)

ಒಬ್ಬ ಮಾನ್ಯ ಸದಸ್ಯರು :- ಬಣ್ಣ ಮತ್ತು ಬ್ರಷ್ ಹೊರಗೆ ಇಟ್ಟು ಬರಲಿ ಮೊದಲು.

ಅಧ್ಯಕ್ಷರು :- ಅವರು ತೆಗೆದು ಇಡುವುದಕ್ಕೆ ನಾನು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ :- ಮಾನ್ಯ ಅಧ್ಯಕ್ಷರೇ ಇವತ್ತು ಅತ್ಯಂತ ಮಹತ್ವಪೂರ್ಣವಾದ ವಿಚಾರದ ಬಗ್ಗೆ ಗಮನ ಸೆಳೆಯುವ ಸೂಚನೆಯ ಮುಖಾಂತರ ಪ್ರಸ್ತಾಪ ಮಾಡಬೇಕಿತ್ತು. ಅದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಅಭ್ಯರ್ಥಿಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿತ್ತು . ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಆ ವಿಷಯ ಪ್ರಸ್ತಾವಾಗದಂತೆ ತಡೆಯುವ ವ್ಯವಸ್ಥಿತವಾಗಿರತಕ್ಕ ಸಂಚು ನಡೆಯುತ್ತಿದೆ ಎಂದು ಹೇಳಬೇಕಾಗಿದೆ. ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಉದ್ಯೋಗವನ್ನು ಹುಡುಕಿಕೊಂಡು ಬರತಕ್ಕ ಅಭ್ಯರ್ಥಿಗಳಿಗೆ ಅನ್ಯಾಯವಾಗುವ ರೀತಿಯಲ್ಲಿ ವ್ಯವಸ್ಥಿತವಾದ ಸಂಚು ಇವತ್ತಿನ ದಿವಸ ನಡೆಯುತ್ತಿದೆಯೆಂದು ನಾನು ಆರೋಪ ಮಾಡಬೇಕಾಗಿದೆ. ಆದ್ದರಿಂದ ಇವತ್ತು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಸರ್ಕಾರ ಕನ್ನಡವನ್ನೆ ಒಂದನೇ ತಾರೀಖಿನಿಂದ ಜಾರಿಗೆ ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಚರ್ಚೆ ಆಗಬೇಕು. ಅದಕ್ಕೆ ಅವಕಾಶ ಕೊಡಬೇಕು . ಅದರ ಬಗ್ಗೆ ನಾನು ಕೂಡಾ ಭಾಗವಹಿಸಿ ಮಾತನಾಡಬೇಕಾಗಿದೆ. ಕನ್ನಡ ಭಾಷೆ ಈಗ ಏನಾಗಿದೆಯೆಂದು ಹೇಳಬೇಕಾದ ಅವಶ್ಯಕತೆಯಿದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಐದು ನಿಮಿಷ ಸಭೆಯನ್ನು ಮುಂದೂಡಿದರೆ ಒಳ್ಳೆಯದು.

ಶ್ರೀ ಆರ್. ವಿ. ದೇಶಪ್ಪಾಂಡೆ :- ಐದು ನಿಮಿಷ ಕಾಲ ಸಭೆಯನ್ನು ಮುಂದೂಡಿದರೆ ಎಲ್ಲಾ ಸರಿ ಬರುತ್ತದೆ ಎಲ್ಲಾ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಸರ್ಕಾರದ ಅಭಿಪ್ರಾಯ ಏನು ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು :- ಶ್ರೀ ವಾಟಾಳ್ ನಾಗರಾಜ್ ಅವರು ತಂದಂಥ ಪೇಯಿಂಟನ್ನು ಹೊರಗಡೆ ಕಳಿಸಿಕೊಡಿ ಎಂದು ಹೇಳಿದ್ದೇನೆ. ಆಮೇಲೆ ಮುಂದೆ ಮಾತನಾಡೋಣ.

(ಗೊಂದಲ)

ಅಧ್ಯಕ್ಷರು :-ನಾನು ಆಜ್ಞೆ ಮಾಡಿದ ಮೇಲೆ .....

ಶ್ರೀ ಜಿ. ರಾಜುಗೌಡ :- ಈ ಸದನಕ್ಕೆ ಚ್ಯುತಿ ತರುವುದಕ್ಕೆ ಆಗುವುದಿಲ್ಲ. ಹಾಗೆ ಚ್ಯುತಿ ತಂದವರನ್ನು ತಾವು ಹೊರಗೆ ಹಾಕಬೇಕಾಗಿ ಬರುತ್ತದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಐದು ನಿಮಿಷ ಸಭೆಯನ್ನು ಮುಂದೂಡಿ .

ಅಧ್ಯಕ್ಷರು :-ಸಭೆಯನ್ನು ಮುಂದೂಡುವ ಬಗ್ಗೆ ನಾನು ವಿಚಾರ ಮಾಡುತ್ತೇನೆ. ನಾನು ಹೇಳಿದ ನಂತರ ನೀವು ಮಾಡದೇ ಹೋದರೆ ಅಮ ಬೇರೆ ಪರಿಣಾಮವಾಗುತ್ತದೆ. ಏಕೆಂದರೆ ನಾನು ಹೇಳಿದ್ದೇನೆ, ಹೊರಗೆ ಇಟ್ಟು ಬನ್ನಿ ಅಂತ. ಮುಂದೆ ಮಾತನಾಡೋಣ. ಚರ್ಚೆ ಮಾಡೋಣ ಅಂತ ಹೇಳಿದ್ದೇನೆ. ತಾವು ಹೀಗೆ ಮಾಡುವುದು ಸರಿ ಅಲ್ಲ.

(ಗೊಂದಲ)

ಡಾ : ಜೀವರಾಜ ಆಳ್ವ :- ತಾವು ಈ ವಿಷಯದಲ್ಲಿ ಬಹಳ ಜಗ್ಗುವುದು ಬೇಡ. ತಮ್ಮ ರೂಲಿಂಗ್‌ನ್ನು ನಾವು ಪ್ರಶ್ನಿಸುವುದಿಲ್ಲ. ಅವರಿಗಿಂತ ನಮಗೆಲ್ಲರಿಗೆ ತಮ್ಮ ಬಗ್ಗೆ ಅಪಾರ ಗೌರವ ಇದೆ.

ಅಧ್ಯಕ್ಷರು :- ತಾವು ನನ್ನ ಆಜ್ಞೆಯನ್ನು ಪಾಲಿಸಿರಿ. ಆಮೇಲೆ ಮಾಡೋಣ. ಅದನ್ನು ಮೊದಲು ಕಳಿಸಿಕೊಡಿ.

ಡಾ : ಜೀವರಾಜ ಆಳ್ವ :- ತಾವು ರಿಜೆಕ್ಟ್ ಮಾಡಿದರೆ ಪೇಯಿಂಟ್, ಬ್ರಷ್ ಎಲ್ಲ ಹೊರಗೆ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು :- ಸದನದ ಕಾಲವನ್ನು ಈ ರೀತಿ ವ್ಯರ್ಥ ಮಾಡುವುದಕ್ಕಿಂತ, ಇನ್ನು ಎಷ್ಟೋ ವಿಷಯಗಳ ಬಗ್ಗೆ ಪ್ರಸ್ತಾವನೆ, ಚರ್ಚೆ ಆಗಬೇಕಾಗಿದೆ. ನಾನು ಆ ವಸ್ತುಗಳನ್ನು ತಂದಿದ್ದನ್ನು ಹೊರಗಡೆ ಇಡಿ ಎಂದು ಅಷ್ಟೇ ಹೇಳಿದ್ದೇನೆ. ಅವುಗಳನ್ನು ಹೊರಗೆ ಇಡದೇ ಹೋದರೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ಅನಿವಾರ್ಯ ಮಾಡುವುದಕ್ಕೆ ನನ್ನನ್ನು ಹಚ್ಚಬೇಡಿ. ನಾನು ಹೇಳುತ್ತೇನೆ, ನೀವು ಹೊರಗಡೆ ಇಟ್ಟು ಬನ್ನಿ, ನಿಮಗೆ ಏನು ತೊಂದರೆಯಾಗಿದೆ, ಅದರ ಬಗ್ಗೆ ನಾನು ವಿಚಾರ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಶಾಸಕರ ರಕ್ಷಣೆಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾನು ತೆಗೆದುಕೊಳ್ಳುತ್ತೇನೆ. ಆದರೆ ಈಗ ನಾನು ಹೇಳಿದ ನಂತರ ತಾವು ಮಾಡದೆ ಹೋದರೆ ಮುಂದೆ ಏನು ಕ್ರಮ ತೆಗದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ನಾನು ಅನಿವಾರ್ಯವಾಗಿ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :-ಕನ್ನಡದ ಬಗ್ಗೆ ಇಲ್ಲಿ ಯಾರಿಗೂ ಆದರ ಇಲ್ಲ ಅಂತ ಅಲ್ಲ. ಇಲ್ಲಿ ಇರತಕ್ಕಂಥ 224 ಮಂದಿ ಶಾಸಕರು ಸಹಿತ ಕನ್ನಡದ ಬಗ್ಗೆ ಕಳಕಳಿ, ಅಭಿಮಾನ ಉಳ್ಳವರಾಗಿದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :-ನಿಯಮ ಉಲ್ಲಂಘನೆ ಮಾಡಿದವರನ್ನು ಸಹಿಸಬಾರದು. ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನೀವು ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಎಂ. ಜಯಣ್ಣ :- ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು ತಾವು ತಂದಿರತಕ್ಕ ಸಲಕರಣೆಗಳನ್ನು ದಯವಿಟ್ಟು ಹೊರಗಡೆ ತೆಗೆದುಕೊಂಡು ಹೋದರೆ ಸದನದ ಕಾರ್ಯಕಲಾಪಗಳು ಬಹಳ ಸುಗಮವಾಗಿ ನಡೆಯುತ್ತವೆ. ತಮ್ಮಲ್ಲಿ ನಾನು ಬಹಳ ಕಳಕಳಿಯಿಂದ, ವಿಶ್ವಾಸದಿಂದ ಕೇಳಿಕೊಳ್ಳುತ್ತೇನೆ. ಈ ಸದನದ ಕಾರ್ಯಕಲಾಪಗಳನ್ನು ನಡೆಸಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಂಡು ತಾವು ತಂದಿರತಕ್ಕ ಬ್ರಷ್ ಪೆಯಿಂಟ್ ಅಥವಾ ಕೋಲು ಮುಂತಾದ್ದನ್ನು ಏನಾದರೂ ತಂದಿದ್ದರೆ ದಯವಿಟ್ಟು ಹೊರಗಡೆ ತೆಗೆದುಕೊಂಡು ಹೋಗಿ ಇಟ್ಟುಬನ್ನಿ.

ಶ್ರೀ ವಾಟಾಳ್ ನಾಗರಾಜ್ :- ನಾನು ಇನ್ನೇನೂ ತಂದಿಲ್ಲ.

ಶ್ರೀ ಎಂ. ಜಯಣ್ಣ :- ಕೈಯಲ್ಲಿ ಬ್ರಷ್ ಇದ್ದರೂ ಅದು ಕೋಲು ಇದ್ದಂತಾಗುತ್ತದೆ. ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಾವು ತಂದಿರತಕ್ಕ ವಸ್ತುಗಳನ್ನು ಹೊರಗಡೆ ಕಳುಹಿಸಿಕೊಟ್ಟರೆ ಸದನದ ಮುಂದಿನ ಕಾರ್ಯಕ್ರಮಗಳನ್ನು ನಡೆಯುವುದಕ್ಕೆ ಅನುಕೂಲವಾಗುತ್ತದೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ :- ತಮ್ಮ ಆಜ್ಞೆಯನ್ನು ಪರಿಪಾಲನೆ ಮಾಡತಕ್ಕ ಕರ್ತವ್ಯ ಅವರದು.

(ಗೊಂದಲ)

ಡಾ : ಎನ್. ಬಿ. ನಂಜಪ್ಪ :- ಅವರು ಬೇರೆ ಏನನ್ನೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬಾರದು.

(ಗೊಂದಲ)

ಡಾ : ಎನ್. ಬಿ. ನಂಜಪ್ಪ:- ನೀವು ಆರ್ಡರ್ ಮಾಡಿದರೂ ಅವರ ಈ ರೀತಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಹೇಗಾಗುತ್ತದೆ ?

(ಗೊಂದಲ)

ಶ್ರೀ ಎಸ್. ಕೆ. ದಾಸಪ್ಪ :-ಅವರೇ ಅಳಿಸುವುದಕ್ಕೆ ಬ್ರಷ್‌ನ್ನು ತೆಗೆದುಕೊಂಡು ಹೋಗಿದ್ದಾರೆ. ಮಾನ್ಯ ಸದಸ್ಯರು ಒಳಗಡೆ ಬಂದು ಮಾತನಾಡುವುದಕ್ಕೆ ಅವಕಾಶವನ್ನು ತಾವು ಕೊಡಬಾರದು. ತಮ್ಮ ಆದೇಶವಾದ ಮೇಲೆ ಅವರಿಗೆ ಅವಕಾಶವನ್ನು ಕೊಡಬೇಕೆ ಹೊರತು.....

ಪ್ರೊ : ಎಂ. ಡಿ. ನಂಜುಂಡಸ್ವಾಮಿ :- ಏಪ್ರಿಲ್ 1ನೇ ತಾರೀಖಿನಿಂದ ಆಡಳಿತವನ್ನು ಕನ್ನಡದಲ್ಲಿಯೇ ನಡೆಸುತ್ತೇವೆಂದು ವಚನವನ್ನು ಕೊಟ್ಟದ್ದುದು ನಾನಲ್ಲ. ಇದರ ಅವಶ್ಯಕತೆ ಇಲ್ಲ ಎಂದು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಹೇಳುವುದಾದರೆ ಆಗಬಹುದು.

(ಗೊಂದಲ)

ಶ್ರೀ ಆರ್ . ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನವನ್ನು 5 ನಿಮಿಷ ಕಾಲ ಅಡ್ಜರ್ನ್ ಮಾಡಿ.

ಶ್ರೀ ಎಸ್. ಕೆ ದಾಸಪ್ಪ :- ಏತಕ್ಕೆ ಅಡ್ಜರ್ನ್ ಮಾಡಬೇಕು ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರ ಬಗ್ಗೆ ನಿಮಗಿಂತ ಹೆಚ್ಚಿನ ರೀತಿಯಲ್ಲಿ ನಮಗೆ ಗೌರವವಿದೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :-ಇಲ್ಲಿ ಸೀನಿಯರ್ ಮಂತ್ರಿಗಳಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಕುಳಿತಿದ್ದಾರೆ. ಅವರು ಒಂದು ಮಾತನ್ನು ಹೇಳುವುದಕ್ಕೆ ಏನು ಕಷ್ಟವಾಗಿದೆ ? ಇದರ ಬಗ್ಗೆ ಎಷ್ಟು ಸಾರಿ ಚರ್ಚೆ ಮಾಡಬೇಕು ? ಈ ಸಭೆಯ ಕಾರ್ಯಕಲಾಪಗಳು ನಡೆಯಬಾರದೆಂದು ನಮ್ಮ ಇಚ್ಛೆ ಇಲ್ಲ.

(ಗೊಂದಲ)

ಶ್ರೀ ಎಸ್. ಕೆ. ದಾಸಪ್ಪ :- ಮಾನ್ಯ ನಾಗರಾಜ್‌ರವನ್ನು ಹೊರಗೆ ಹಾಕಿ. ತಾವು ರೂಲಿಂಗ್ ಕೊಟ್ಟು 1 5 ನಿಮಿಷವಾಯಿತು.

ಶ್ರೀ ಬಿ. ಸ್ವಾಮಿರಾವ್ :- ಸನ್ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನಾನು ವಿನಯದಿಂದ ಕೇಳಿಕೊಳ್ಳುತ್ತಿದ್ದೇನೆ. ಈ ಸದನದ ಸಂಪ್ರದಾಯಕ್ಕೆ, ಗೌರವ-ಘನತೆಗೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಮಸಿ ಬಳಿಯುತ್ತಿದ್ದಾರೆ. ಹಿಂದೆಯೂ ಕೂಡ ವಾಟಾಳ್ ನಾಗರಾಜರು ವಿಧಾನ ಸಭೆಯಲ್ಲಿ ವಿರೋಧವಾಗಿ ನಡೆದುಕೊಂಡು ಆರು ವರ್ಷಗಳ ಕಾಲ ಹೊರಗಡೆ ಇದ್ದರು ಎನ್ನುವುದನ್ನು ತಮ್ಮ ನೆನಪಿಗೆ ತಂದು ಕೊಡುತ್ತಿದ್ದೇನೆ. ಈಗಲೂ ಅವರನ್ನು ಹೊರಗೆ ತೆಗೆದುಕೊಂಡು ಹೋಗಬೇಕು. ಕಾರಣ, ತಮ್ಮ ಆಜ್ಞೆಯನ್ನು ಉಲ್ಲಂಘಿಸುತ್ತಿದ್ದಾರೆ. ಈ ಸದನದ ನೀತಿಯನ್ನು ವಿರೋಧಿಸುತ್ತಿದ್ದಾರೆ. ನಮ್ಮ ಎಲ್ಲಾ ಶಾಸಕರಿಗೂ ಕೂಡ ಅವಮಾನ ಮಾಡತಕ್ಕ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ., ತಾವು ಅವರನ್ನು ಬಲಾತ್ಕಾರವಾಗಿ ಹೊರಗೆ ಹಾಕಬೇಕು ; ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅವರನ್ನು ಎತ್ತಿ ಹೊರಕ್ಕೆ ಹಾಕಬೇಕು. ಅವರ ಸಂಪ್ರದಾಯ ಹಾಗೆಯೇ ಇದೆ. ಹಿಂದೆಯೂ ಕೂಡ ಇದೇ ವಿಧಾನ ಸಭೆಯಲ್ಲಿ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡಿದೆ. ಇಂದೂ ಕೂಡ ಅದು ಅನಿವಾರ್ಯವಾಗುತ್ತಿದೆ. ಈ ಸಂದರ್ಭದಲ್ಲಿ ಅವರನ್ನು ಹೊರಗೆ ಹಾಕಿಸಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಅವರು ಹಾಗೆ ಅಧ್ಯಕ್ಷರ ಪೀಠಕ್ಕೆ ಮುತ್ತಿಗೆ ಹಾಕಿದ್ದರು, ಆ ಪೀಠದ ಮೇಲೆ ಹತ್ತಿ ಕುಳಿತಿದ್ದರು, ಆ ಪೀಠಕ್ಕೆ ಗೌರವ ಕೊಟ್ಟಿರಲಿಲ್ಲ. ಆ ಪೀಠದ ಮೇಲೆ ಕುಳಿತು, ಈಗ ಅವರು ನನಗೆ ಹೇಳುತ್ತಿದ್ದಾರೆ, ಸಂಪ್ರದಾಯದ ಬಗ್ಗೆ ಮಾತನಾಡುತ್ತಿದ್ದಾರೆ. ಆ ರೀತಿ ಹೇಳತಕ್ಕ ಹಕ್ಕು ಅವರಿಗೆ ಎಲ್ಲಿದೆ?

(ಗೊಂದಲ)

ಶ್ರೀ ಎಸ್. ರಮೇಶ್ :- ತಾವು ಒಂದು ತೀರ್ಪು ಕೊಟ್ಟಿದ್ದೀರಿ, ಆ ತೀರ್ಪಿನ ಪ್ರಕಾರ ನಡೆಯಬೇಕಾದದ್ದು ಎಲ್ಲಾ ಸದಸ್ಯರ ಜವಾಬ್ದಾರಿ.

ಶ್ರೀಮತಿ ಮೋಟಮ್ಮ :- ತಾವು ಆದೇಶ ನೀಡಿದಿರಿ, ನಿಮ್ಮ ಆದೇಶದಂತೆ ನಡೆಯಬೇಕಾದುದು ಎಲ್ಲಾ ಸದಸ್ಯರ ಆದ್ಯ ಕರ್ತವ್ಯ. ಆದರೆ ನಿಮ್ಮ ಆದೇಶಕ್ಕೆ ತಲೆ ಬಾಗದೇ ಇದ್ದಾಗ ನೀವು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನಾವು ಯಾರೂ ತಮಗೆ ಹೇಳಬೇಕಾಗಿಲ್ಲ. ಅದ್ದರಿಂದ ತಾವು ಇದರ ಬಗ್ಗೆ ವಿಚಾರ ಮಾಡಬೇಕು. ಅನಾವಶ್ಯಕವಾಗಿ ಸಮಯವನ್ನು ಹಾಳು ಮಾಡುವುದರಲ್ಲಿ ಅರ್ಥವಿಲ್ಲ. ಈಗಾಗಲೇ ಸಾಕಷ್ಟು ಸಮಯ ಹಾಳು ಮಾಡಿದ್ದೇವೆ.

ಅಧ್ಯಕ್ಷರು :- ವಾಚ್ ಆ್ಯಂಡ್ ವಾರ್ಡ್‌ನವರಿಗೆ ಹೇಳಿ, ಆ ಪೇಯಿಂಟ್ ಮತ್ತು ಬ್ರಷ್ ಹೊರಗಡೆ ಇಡುವುದಕ್ಕೆ ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್ :- ತಮ್ಮ ಆಜ್ಞೆಯನ್ನು ಪಾಲಿಸದೇ ಇರುವುದರಿಂದ, ಅವರ ಮೇಲೆಯೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ.

(ಮಾರ್ಷಲ್‌ರವರು ಬಂದು, ವಾಟಾಳ್ ನಾಗರಾಜ್‌ರವರ ಹತ್ತಿರ ಇದ್ದ ಪೆಯಿಂಟ್ ಡಬ್ಬ ಮತ್ತು ಬ್ರಷ್‌ಗಳನ್ನು ಹೊರಗಡೆ ತೆಗೆದುಕೊಂಡು ಹೋದರು.)

ಶ್ರೀ ವಾಟಾಳ್ ನಾಗರಾಜ್ :- ತಮ್ಮ ರಕ್ಷಣೆಗೆ ನಾವು ಬಂದಿದ್ದೇವೆ. ತಾವು ನನ್ನ ಎರಡು ಮಾತುಗಳನ್ನು ಕೇಳಲೇಬೇಕು. ತಮ್ಮ ರಕ್ಷಣೆಗೆ, ಪ್ರೊ: ನಂಜುಂಡಸ್ವಾಮಿಯವರು, ಬಾಬಾಗೌಡ ಪಾಟೀಲರು ಬಂದಿದ್ದರು. ನಿಮ್ಮಿಂದ ನಮಗೆ ರಕ್ಷಣೆ ದೊರಕಲಿಲ್ಲವೆಂದು ನಾವು ಅಂದುಕೊಂಡಿಲ್ಲ. ಆದರೆ ನಮಗೆ ರಕ್ಷಣೆ ಇಷ್ಟು ರೀತಿಯಲ್ಲಿ ದೊರಕಿದೆ ಎಂದು ನಾನು ಅಂದುಕೊಂಡಿಲ್ಲ. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತು ನಾವು ಮತ್ತೆ ಹೊರಗಡೆ ಹೋಗಬೇಕಾಗುತ್ತದೆ. ನಾವು ಮತ್ತೆ ಅದೇ ಕೆಲಸಕ್ಕೆ ಹೋಗುತ್ತಿದ್ದೇವೆ. ಅಂಗ್ಲ ಫಲಕಗಳಿಗೆ ಮಸಿ ಬಳಿಯುವುದಕ್ಕೆ ಹೋಗುತ್ತಿದ್ದೇವೆ. ತಾವು ನಮಗೆ ರಕ್ಷಣೆ ಕೊಡುವುದು ತಮಗೆ ಸೇರಿದುದು. ನಾವು ಇನ್ನೇನೂ ಮಾಡುವುದಕ್ಕಾಗುವುದಿಲ್ಲ. ನಾವು ಅತ್ಯಂತ ಕಳಕಳಿಯಿಂದ ಸವಿನಯದಿಂದ ಕೇಳಿದ್ದೇವೆ. ಈ ಸರ್ಕಾರದ ನಿರ್ಧಾರ ಏನು? ಸರ್ಕಾರ ಬದುಕಿದೆಯೇ? ಸತ್ತಿದೆಯೇ? ಹೇಳಿ, ಸರ್ಕಾರ ಏನು ಮಾಡುತ್ತಿದೆ ? ಇವತ್ತು ಆಡಳಿತ ಭಾಷೆ ಕನ್ನಡ ಎಂದು ಹೇಳಬೇಕಾದರೆ ಎಲ್ಲಿದೆ ಕನ್ನಡ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಮೂರನೇ ಮಹಡಿಯಲ್ಲಿರುವ ಇಂಗ್ಲೀಷ್ ಬೋರ್ಡುಗಳಿಗೆ ಡಾಂಬರು ಬಳಿಯುತ್ತೇವೆಂದು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಹೇಳಿದ್ದಾರೆ. ಅದು ಏನಾಯಿತು ಸ್ವಾಮಿ?

ಅಧ್ಯಕ್ಷರು :- ಪ್ರಶ್ನೋತ್ತರ ವೇಳೆ ಮುಗಿಯಿತು ಮುಂದಿನ ವಿಷಯಕ್ಕೆ ಹೋಗೋಣ. ಈಗ ಗಮನ ಸೆಳೆಯುವ ಸೂಚನೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಸಭಾತ್ಯಾಗ ಮಾಡುತ್ತೇನೆ ಸ್ವಾಮಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :- ಅವರು ಒಂದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೇಳಿ ಅಧ್ಯಕ್ಷರೇ ? ಅವರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ರೆಡಿಯಾಗಿದ್ದಾರೆ.

(ಶ್ರೀ ವಾಟಾಳ್ ನಾಗರಾಜ್ ಮತ್ತು ರೈತ ಸಂಘದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :- ಮುಖ್ಯ ಮಂತ್ರಿಗಳು ಬರಲಿ ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ ?

ಶ್ರೀ ಹೆಚ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ. ಕನ್ನಡ ನಾಡು ನುಡಿಯ ಬಗ್ಗೆ ಈ ಸದನದಲ್ಲಿ.....

ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ ನನ್ನ ಡಬ್ಬ ಕೊಡಿಸಿ.....

(ಗೊಂದಲ)

ಅಧ್ಯಕ್ಷರು : ಕನ್ನಡದ ಬಗ್ಗೆ ಮಾನ್ಯ ಸಚಿವರು ಏನೋ ಹೇಳುತ್ತಾರೆ ಕೇಳಿ.

ಶ್ರೀ ವಾಟಾಳ್ ನಾಗರಾಜ್ :- ನಾನು ಹೊರಗೆ ಹೋಗುತ್ತೇನೆ. ನನ್ನ ಡಬ್ಬ ಕೊಡಿಸಿ ಸ್ವಾಮಿ. ನಾನು ತಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಹೆಚ್. ವಿಶ್ವನಾಥ್ :- (ಕನ್ನಡ ಮತ್ತು ಸಂಸ್ಕೃತಿ ಸಚಿವರು) ಮಾನ್ಯ ಅಧ್ಯಕ್ಷರೆ, ಕನ್ನಡ ನಾಡು ನುಡಿಯ ಬಗ್ಗೆ ಈ ಸದನದಲ್ಲಿ ಬಹಳ ಅಭಿಮಾನದಿಂದ ಮಾನ್ಯ ಸದಸ್ಯರು ಭಾಗವಹಿಸಿ ಚರ್ಚೆ ಮಾಡಿದ್ದಾರೆ. ಇದು ಯಾರ ಬೇಡಿಕೆಯು ಅಲ್ಲ. ಈಗಾಗಲೇ ಸರ್ಕಾರ ಕನ್ನಡವೇ ಆಡಳಿತ ಭಾಷೆಯೆಂದು ಘೋಷಣೆ ಮಾಡಿದೆ. ಆದರೆ ಅದನ್ನು ಅನುಷ್ಠಾನಕ್ಕೆ ತರಬೇಕು ಎನ್ನತಕ್ಕಂಥಾದ್ದು ಈ ನಾಡಿನ ಜನರ ಆಸೆಯಿತ್ತು. ಸನ್ಮಾನ್ಯ ವೀರಪ್ಪ ಮೊಯಿಲಿಯವರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅನುಷ್ಠಾನಕ್ಕೆ ತರುತ್ತಿದ್ದಾರೆ. ಕಡ್ಡಾಯವಾಗಿ ನಿಖರವಾಗಿ ವಿಷಯವನ್ನು ಈ ನಾಡಿನ ಜನತೆಯ ಭಾಷೆಯಾದ ಕನ್ನಡದಲ್ಲಿ ವ್ಯಕ್ತ ಮಾಡಬೇಕೆಂದು ಏಪ್ರಿಲ್ 1ನೇ ತಾರೀಖಿನಿಂದ ನಾವು ವಿಧಾನಸೌಧದಿಂದ ಹಿಡಿದು ಎಲ್ಲಾ ಕಡೆಗಳಲ್ಲಿ ಅನುಷ್ಠಾನ ಮಾಡುತ್ತೇವೆ ಮತ್ತು ಅದನ್ನು ಜಾರಿ ಮಾಡಲು ಪ್ರಾರಂಭ ಮಾಡಿದ್ದೇವೆ. 1993ನೇ ಇಸವಿ ಏಪ್ರಿಲ್ 1ನೇ ತಾರೀಖಿನಿಂದ 1994ನೇ ಇಸವಿ ಏಪ್ರಿಲ್‌ವರೆಗೂ ಒಂದು ವರ್ಷಗಳ ಕಾಲ ಕನ್ನಡ ಜಾಗೃತಿಕ ವರ್ಷವೆಂದು ಘೋಷಣೆ ಸರ್ಕಾರ ಮಾಡಿದೆ. ಈ ನಾಡಿನಲ್ಲಿ ನಿಜವಾಗಿಯೂ ದ್ವೇಷ, ಸಾಮರಸ್ಯಕ್ಕೆ ಅವಕಾಶ ಇಲ್ಲ. ಮತ್ತೆ ಈ ನಾಡಿನಲ್ಲಿ ಬದುಕು ಮಾಡತಕ್ಕಂಥ ನಮ್ಮ ಅಲ್ಪ ಸಂಖ್ಯಾತ ವರ್ಗದವರೂ ಕೂಡ ಈ ನಾಡಿನ ಭಾಷೆಯ ಬಗ್ಗೆ ಅಭಿಮಾನದಿಂದ ಇದ್ದಾರೆ. ಮತ್ತು ನಮ್ಮ ಹಿರಿಯ ಮಾಜಿ ಸಚಿವರಾದ ಹಾಗೂ ಸದಸ್ಯರಾದ ಶ್ರೀಮಾನ್ ಅಜೀಜ್ ಸೇಠ್‌ರವರು ಬೇಡಿಕೆ ಏನಿದೆ ಅಂದರೆ ಸರ್ಕಾರದ ಮುಂದೆ ರಾಜ್ಯದ ಎಲ್ಲಾ ಉರ್ದು ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ಕೊಡತಕ್ಕಂಥ ಬೇಡಿಕೆ ಇದೆ. ಅದಕ್ಕೆ ನಾವು ಮುಂದಿನ ವರ್ಷದಿಂದ ಎಲ್ಲಾ ಉರ್ದು ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ನೇಮಕ ಮಾಡತಕ್ಕಂಥ ವಿಷಯವನ್ನು ಕೂಡ ಗಂಭೀರವಾಗಿ ಪರಿಗಣನೆ ಮಾಡಿ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಕನ್ನಡ ಅನುಷ್ಠಾನ ಮಾಡಲು ಏನೇನೂ ಸೌಲಭ್ಯ ಸವಲತ್ತುಗಳು ಬೇಕೋ ಅದನ್ನು 1993-94ನೇ ಇಸವಿಯಲ್ಲಿ ಕೊಡಲಾಗುವುದು. ಈ ವರ್ಷದಲ್ಲಿ ಈ ನಾಡಿನ ಎಲ್ಲಾ ವರ್ಗಗಳ ಸಹಕಾರ ಮತ್ತು ಈ ನಾಡಿನ ಎಲ್ಲಾ ಜನರ ಪ್ರೋತ್ಸಾಹದಿಂದ ಈ ಒಂದು ಕನ್ನಡದ ಕೆಲಸವನ್ನು ಸರ್ಕಾರ ಮಾಡುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಕನ್ನಡ ಭಾಷೆಯ ಅನುಷ್ಠಾನದ ವಿಚಾರದಲ್ಲಿ ಅದು ಅಲ್ಪ ಸಂಖ್ಯಾತರೇ ಆಗಿರಲಿ ಯಾವುದೇ ಕನ್ನಡ ಪರ ಸಂಘಗಳು• ಆಗಿರಲಿ ಯಾವುದೇ ಸಂಶಯಕ್ಕೆ ಎಡೆ ಮಾಡತಕ್ಕಂಥ ಅವಕಾಶವಿಲ್ಲ. ಹಾಗೂ ಇದು ಸರ್ಕಾರದ ದಟ್ಟ ನಿಲುವಾಗಿದೆ. ಇದು ಇವತ್ತಿನಿಂದ ಪ್ರಾರಂಭವಾಗಿದೆ. ಒಂದು ವರ್ಷಗಳ ಕಾಲ ಕನ್ನಡ ಜಾಗೃತಿ ವರ್ಷವೆಂದು ನಾವು ಘೋಷಣೆ ಮಾಡಿದ್ದೇವೆ. ತನ್ಮೂಲಕವಾಗಿ ಹಂತ ಹಂತವಾಗಿ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಏನು ತೀರ್ಮಾನ ಮಾಡಿದ್ದೇವೆ, ಆ ದಿಸೆಯಲ್ಲಿ ತಮ್ಮೆಲ್ಲರ ಸಲಹೆಗಳು ಕೂಡ ಇದ್ದರೆ ಅದನ್ನು ಸರ್ಕಾರಕ್ಕೆ ನೀಡಬಹುದು. ಹೀಗೆ ತಮ್ಮೆಲ್ಲರ ಸಹಕಾರವನ್ನು ತೆಗೆದುಕೊಂಡು ಸಮಸ್ತರ ಸಹಕಾರ,

ಸಲಹೆ, ಸೂಚನೆಗಳು ಮತ್ತು ಪ್ರೋತ್ಸಾಹದಿಂದ ಕನ್ನಡವನ್ನು ಆಡಳಿತ ಭಾಷೆಯಾಗಿ ಕೊಡುತ್ತೇವೆ ಎನ್ನುವ ಮಾತನ್ನು ನಾನು ತಮ್ಮಲ್ಲಿ ಮತ್ತೊಮ್ಮೆ ಪುನರುಚ್ಚಿಸ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಕೃಷ್ಣ ಹೆಗಡೆಯವರ ಸರಕಾರದಲ್ಲಿ ಕನ್ನಡ ಭಾಷೆಯ ಅನುಷ್ಠಾನದ ಬಗ್ಗೆ ಒಂದು ಪ್ರಮಾಣಿಕವಾದಂಥ ಪ್ರಯತ್ನ ನಡೆಯಿತು. ಪಾಟೀಲ್ ಪುಟ್ಟಪ್ಪನವರು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿ ಕನ್ನಡ ಭಾಷೆಯು ಸರ್ಕಾರದ ಕಛೇರಿಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ, ಮಂಡಳಿಗಳಲ್ಲಿ, ವಿಧಾನಸೌಧದಲ್ಲಿಯೂ ಕೂಡ ಕನ್ನಡವನ್ನು ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಿದರು. ಆ ಪ್ರಯತ್ನ ಕೂಡ ಇವತ್ತು ಕಾಣುತ್ತಾ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ಕನ್ನಡವನ್ನು ಏಪ್ರಿಲ್ ಒಂದರಿಂದ ಅನುಷ್ಠಾನಕ್ಕೆ ತರುತ್ತೇವೆ ಎಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರು ಈ ವರ್ಷದಿಂದ ಶುರು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಹಾಗಾದರೆ ಸರಕಾರದವರು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ, ಅದು ನಮಗೆ ಕಾಣಿಸುತ್ತಾ ಇಲ್ಲ. ಆದರೆ ನಾಡಿನ ಜನತೆಗೆ ಸುಳ್ಳು ಹೇಳಿ ಸುಳ್ಳು ಭರವಸೆಗಳನ್ನು ಕೊಟ್ಟುಕೊಂಡು ಹೋಗುವುದು ಬೇಡ. ರಾಜ್ಯದಲ್ಲಿ ಕನ್ನಡ ಭಾಷೆಯ ಅನುಷ್ಠಾನಕ್ಕೆ ಯಾರ ಅಡ್ಡಿಯೂ ಇಲ್ಲ. ಆದರೆ ಈ ದಿಕ್ಕಿನಲ್ಲಿ ಯಾವ ಪ್ರಯತ್ನಗಳು ಕೂಡ ನಡೆದಿಲ್ಲ ಎಂದು ಹೇಳಬೇಕಾಗುತ್ತದೆ. ಈ ಬಗ್ಗೆ ನಮ್ಮ ಪ್ರತಿಭಟನೆಯನ್ನು ಸೂಚಿಸಿ ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

(ಮಾನ್ಯ ವಿರೋಧ ಪಕ್ಷದ ನಾಯಕರು, ಜನತಾ ದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕನ್ನಡವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಮತ್ತು ಅದರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದು ಒಂದು ಭರವಸೆಯನ್ನು ಕೊಟ್ಟಿದ್ದಾರೆ ಆದರೆ ಇವತ್ತು ಸರಕಾರದವರು ನಿರ್ದಿಷ್ಟವಾಗಿ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂಬ ಬಗ್ಗೆ ಹೇಳಬೇಕಾಗಿದೆ. ನಿರ್ದಿಷ್ಟವಾದ ಯಾವುದೇ ಕಾರ್ಯಕ್ರಮಗಳು ಇಲ್ಲದೇ ಕಳೆದ ಮೂರು ವರ್ಷಗಳಲ್ಲಿ ತಾವುಗಳು ಕೊಟ್ಟಿದ್ದ ಯಾವುದೇ ಭರವಸೆಗಳು ಈಡೇರಲಿಲ್ಲ. ರಾಜ್ಯದ ಜನರಿಗೆ ಭರವಸೆಗಳನ್ನು ಕೊಟ್ಟು ಮರುಳು ಮಾಡುವಂಥ ಈ ರೀತಿಯ ಷಢ್ಯಂತರವು ಸರಿಯಲ್ಲ. ನಮಗೆ ನಂಬಿಕೆಯೂ ಇಲ್ಲ. ಕನ್ನಡದ ನಾಡು ನುಡಿಯ ಬಗ್ಗೆ ಕಳಕಳಿಯೂ ನಿಮ್ಮಲ್ಲಿ ಇಲ್ಲ, ಮತ್ತು ಭರವಸೆಗಳ ಅನುಷ್ಠಾನ ಮಾಡುವ ಶಕ್ತಿಯೂ ಕೂಡ ಈ ಸರಕಾರದಲ್ಲಿ ಇಲ್ಲ, ಹಾಗೂ ಪೊಳ್ಳು ಭರವಸೆಗಳನ್ನು ಕೊಡುವುದು ಬೇಡ ಎಂದು ಹೇಳಿ ಸರಕಾರದ ಧೋರಣೆಯನ್ನು ಪ್ರತಿಭಟಿಸಿ ನಾನು ಮತ್ತು ನನ್ನ ಪಕ್ಷದವರು ಸಭಾತ್ಯಾಗ ಮಾಡುತ್ತೇವೆ. (ಮಾನ್ಯ ಬಿಜೆಪಿಯ ಸದಸ್ಯರುಗಳು ಶ್ರೀ ಬಿ.ಎಸ್. ಯಡಿಯೂರಪ್ಪನವರ ಜೊತೆಗೆ ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು :- ಮಾನ್ಯ ಎಸ್.ಎಂ. ಯಾಹ್ಯಾರವರು. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಬಗ್ಗೆ ಪ್ರಸ್ತಾವನೆ ಮಾಡಿ.

ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿಯನ್ನು ವಿಸ್ತರಿಸುವುದು.

1992ನೇ ಸಾಲಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕ್ಕೆ ಸಂಬಂಧಪಟ್ಟಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿ ವಿಸ್ತರಣೆ.

ಶ್ರೀ ಎಸ್.ಎಂ. ಯಾಹ್ಯಾ :- (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕಕ್ಕೆ ಸಂಬಂಧಪಟ್ಟಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 30ನೇ ಜೂನ್ 1993ರ ವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರಿಕೊಳ್ಳುತ್ತೇನೆ.